ವಿಜಯಪುರ | ಸಂಪುಟ 04 | ಸಂಚಿಕೆ 091 | ಪುಟ 04 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ
ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur
editor.udayarashmi@gmail.com
RNI NO: KARKAN/2023/86203
ಗುರುವಾರ, ಮೇ, 28, 2026



"ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಪ್ರತಿ ಮಾತಿಗೂ ಬದ್ಧರಾಗಿ ನಡೆಯುವ ಮೂಲಕ ನುಡಿದಂತೆ ನಡೆದ ಹೆಮ್ಮೆ ನಮಗಿದೆ. 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಪ್ರತಿ ಮನೆಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ."

# ರಾಜೀನಾಮೆ ಬಗ್ಗೆ ಸುಳಿವು ನೀಡಿದ ಸಿಎಂ ಸಿದ್ದರಾಮಯ್ಯ

## ಸಾಮಾಜಿಕ ಮಾಧ್ಯಮದಲ್ಲಿ ಮಹತ್ವದ ಪೋಸ್ಟ್! | ಗುರುವಾರ ರಾಜೀನಾಮೆ ನೀಡುವುದು ಬಹುತೇಕ ಖಚಿತ | ಕೊನೆಗೂ ಗೊಂದಲಕ್ಕೆ ತೆರೆ ಎಳೆದ ಕೈ ಹೈಕಮಾಂಡ್

ಬೆಂಗಳೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ತೆರೆ ಎಳೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ರಾಜೀನಾಮೆ ನೀಡುವುದು ಬಹುತೇಕ ಖಚಿತವಾಗಿದೆ.



"ರಾಜ್ಯದ ಜನರ ಆಶೀರ್ವಾದದೊಂದಿಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ಪೂರೈಸಿರುವ ಈ ಸಾರ್ಥಕ ಸಂದರ್ಭದಲ್ಲಿ ನಮ್ಮ ಸರ್ಕಾರದ ಎಲ್ಲಾ ಸಾಧನೆಗಳ ಶ್ರೇಯವನ್ನು ಪ್ರತಿಯೊಬ್ಬ ಕನ್ನಡಿಗನಿಗೂ ಅರ್ಪಿಸುತ್ತಿದ್ದೇವೆ."
■ ಸಿದ್ದರಾಮಯ್ಯ
ಮುಖ್ಯಮಂತ್ರಿ

ಈ ಕುರಿತು ಖುದ್ದು ಸಿಎಂ ಸಿದ್ದರಾಮಯ್ಯ ಅವರೇ ಸುಳಿವು ನೀಡಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಮಹತ್ವದ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ.

ನಿನ್ನೆ ದೆಹಲಿಯ ಇಂದಿರಾ ಭವನದಲ್ಲಿ ನಡೆದ ಹೈವೋಲ್ಟೇಜ್ ಸಭೆಯಲ್ಲಿ ರಾಹುಲ್ ಗಾಂಧಿ ಅವರು ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಸುಮಾರು 45 ನಿಮಿಷಗಳ ಕಾಲ ಚರ್ಚಿಸಿದ್ದು, ಅಧಿಕಾರ ಹಂಚಿಕೆ ಸೂತ್ರದಂತೆ ರಾಜೀನಾಮೆ ನೀಡುವಂತೆ ಸಿದ್ದರಾಮಯ್ಯ ಅವರಿಗೆ ಸೂಚನೆ




ನೀಡಿದ್ದಾರೆ ಎನ್ನಲಾಗಿದೆ.

ಇದರ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಅವರು ನಾಳೆ ರಾಜ್ಯಪಾಲರ ಭೇಟಿಗೆ ಸಮಯ ಕೇಳಿದ್ದು, ರಾಜೀನಾಮೆ ನೀಡಲಿದ್ದಾರೆ ಎನ್ನಲಾಗುತ್ತಿದೆ.

ಈ ಮಧ್ಯೆ ಸಿಎಂ ಸಿದ್ದರಾಮಯ್ಯ ಅವರು ಇಂದು ಎಕ್ಸ್‌ನಲ್ಲಿ ಮಹತ್ವದ ಪೋಸ್ಟ್ ಹಂಚಿಕೊಂಡಿದ್ದು, ಇದು ರಾಜೀನಾಮೆ ವಿಚಾರಕ್ಕೆ ಮತ್ತಷ್ಟು ಪುಷ್ಟಿ ನೀಡುವಂತಿದೆ. ಕೆಲವರು ಈ ಪೋಸ್ಟ್‌ನ್ನು ರಾಜೀನಾಮೆಯ ಸುಳಿವು ಎಂದು ಹೇಳುತ್ತಿದ್ದರೆ, ಇನ್ನೂ ಕೆಲವರು ಇದನ್ನು ತಮ್ಮ ಸರ್ಕಾರದ ಮೂರು ವರ್ಷದ ಸಾಧನೆಗಳ ನೆನಪಿನ ರೂಪದಲ್ಲಿ ನೋಡುತ್ತಿದ್ದಾರೆ.

## ರಾಜ್ಯ ಸರ್ಕಾರದ 3 ವರ್ಷದ ಸಾಧನೆ ನೆನೆದ ಸಿದ್ದರಾಮಯ್ಯ



ಸಿಎಂ ಸಿದ್ದರಾಮಯ್ಯ ಅವರು ತಮ್ಮ ಪೋಸ್ಟ್ ನಲ್ಲಿ, ರಾಜ್ಯ ಸರ್ಕಾರ ಮಾಡಿರುವ ಪ್ರತಿಯೊಂದು ಶ್ರೇಯಸ್ಸನ್ನೂ ಕನ್ನಡಿಗರಿಗೆ ಅರ್ಪಿಸುತ್ತೇವೆ ಎಂದು ಹೇಳಿದ್ದಾರೆ. ಅಂದರೆ, ಸರ್ಕಾರ ಮಾಡಿದ ಕೆಲಸದ ಕ್ರೆಡಿಟ್ ಜನರದ್ದೇ, ನಾವು ಕೇವಲ ಕರ್ತವ್ಯ ನಿರ್ವಹಿಸಿದ್ದೇವೆ ಎಂಬ ಸಂದೇಶವನ್ನು ಅವರು ನೀಡಿದ್ದಾರೆ. ಜೊತೆಗೆ, ಕೊಟ್ಟ ಮಾತಿಗೆ ಬದ್ಧರಾಗಿ, ನುಡಿದಂತೆ ನಡೆದೆವು, ನಮ್ಮಲ್ಲಿ ಆ ಬದ್ಧತೆ ಇದೆ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಚುನಾವಣೆಯ ವೇಳೆಯಲ್ಲಿ ನೀಡಿದ ಭರವಸೆಗಳನ್ನು ಗ್ಯಾರಂಟಿ ಯೋಜನೆಗಳ ರೂಪದಲ್ಲಿ ಜಾರಿಗೆ ತಂದಿದ್ದೇವೆ ಎಂಬುದನ್ನು ಅವರು ನೆನಪಿಸಿದ್ದಾರೆ.

ರಾಜ್ಯದ ಜನರ ಆಶೀರ್ವಾದದೊಂದಿಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ಪೂರೈಸಿರುವ ಈ ಸಾರ್ಥಕ ಸಂದರ್ಭದಲ್ಲಿ ನಮ್ಮ ಸರ್ಕಾರದ ಎಲ್ಲಾ ಸಾಧನೆಗಳ ಶ್ರೇಯವನ್ನು ಪ್ರತಿಯೊಬ್ಬ ಕನ್ನಡಿಗನಿಗೂ ಅರ್ಪಿಸುತ್ತಿದ್ದೇವೆ.

ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಪ್ರತಿ ಮಾತಿಗೂ ಬದ್ಧರಾಗಿ ನಡೆಯುವ ಮೂಲಕ ನುಡಿದಂತೆ ನಡೆದ ಹೆಮ್ಮೆ ನಮಗಿದೆ. 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಪ್ರತಿ ಮನೆಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ.

ವಿದ್ಯುತ್ ಬಿಲ್ ಹೊರೆಯಿಂದ ಕಂಗೆಟ್ಟಿದ್ದ ಜನರಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡಿ, ನೆಮ್ಮದಿಯ ಬದುಕು ಕಲ್ಪಿಸುವ ಬದ್ಧತೆಯೊಂದಿಗೆ ನಾವು ಜಾರಿಗೆ ತಂದ ಗೃಹಜ್ಯೋತಿ ಯೋಜನೆ ಇಂದು ನಾಡಿನ ಪ್ರತಿ ಮನೆಯನ್ನು ಬೆಳಗುತ್ತಿದೆ.

ಈ ಯೋಜನೆಯಡಿ ರಾಜ್ಯದ ಒಟ್ಟು 1.64 ಕೋಟಿ ಕುಟುಂಬಗಳಿಗೆ ಮಾಸಿಕ ಗರಿಷ್ಠ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಈವರೆಗೆ ಯೋಜನೆಗಾಗಿ ರೂ. 26,115 ಕೋಟಿ ಅನುದಾನವನ್ನು ವ್ಯಯಿಸಲಾಗಿದೆ ಎಂದು ಸಿಎಂ ಬರೆದುಕೊಂಡಿದ್ದಾರೆ.

# ಇಂಧನ ಬೆಲೆ ಏರಿಕೆ ತಕ್ಷಣ ತಡೆಯಲು ಆಮ್ ಆದ್ಮಿ ಪಕ್ಷ ಆಗ್ರಹ



■ ಉದಯರಶ್ಮಿ ದಿನಪತ್ರಿಕೆ

**ಕೇಂದ್ರ ಸರ್ಕಾರ ಸ್ಪಂದಿಸದಿದ್ದರೆ ಹೋರಾಟದ ಎಚ್ಚರಿಕೆ ನೀಡಿದ ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ಭೋಗೇಶ್ ಸೋಲಾಪುರ್ ಎಚ್ಚರಿಕೆ**

ವಿಜಯಪುರ: ಆಮ್ ಆದ್ಮಿ ಪಾರ್ಟಿ ವಿಜಯಪುರ ಜಿಲ್ಲಾ ಘಟಕವು ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ದರಗಳಲ್ಲಿ ಆಗುತ್ತಿರುವ ಗಣನೀಯ ಹೆಚ್ಚಳವನ್ನು ತೀವ್ರವಾಗಿ ಖಂಡಿಸಿದೆ.

ಈ ಕುರಿತು ಆಮ್ ಆದ್ಮಿ ಪಾರ್ಟಿ ವಿಜಯಪುರ ಜಿಲ್ಲಾಧ್ಯಕ್ಷ ಭೋಗೇಶ್ ಸೋಲಾಪುರ್ ಮಾಧ್ಯಮದವರೊಂದಿಗೆ ಮಾತನಾಡುತ್ತ "ಈ ಅನಪೇಕ್ಷಿತ ಬೆಲೆ ಏರಿಕೆಯು ಸಾಮಾನ್ಯ ಜನರ ಜೀವನದ ಮೇಲೆ ಭಾರಿ ಹೊರೆಯನ್ನು ಹೇರಿದೆ ಎಂದು ಆಮ್ ಆದ್ಮಿ ಪಾರ್ಟಿ ಅಭಿಪ್ರಾಯಪಟ್ಟಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಈ ಸಂಬಂಧ ಮನವಿ ಪತ್ರ ಸಲ್ಲಿಸುವ ಮೂಲಕ ಪಾರ್ಟಿ ಈ ವಿಷಯವನ್ನು ಗಂಭೀರವಾಗಿ ಎತ್ತಿ ಹಿಡಿದಿದೆ" ಎಂದು ಅವರು ಹೇಳಿದರು.

"ಈ ಬೆಲೆ ಏರಿಕೆಯ ಪರಿಣಾಮಗಳು ತುಂಬಾ ಅಪಾಯಕಾರಿವಾಗಿದ್ದು ಜನರನ್ನ ಮೇಲೆ ಬರೆ ಎಳದಂತಾಗಿದೆ.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳದಿಂದ ರಸ್ತೆ ಸಾರಿಗೆ ವೆಚ್ಚ ಹೆಚ್ಚಾಗುತ್ತೆ, ಅದರ ಜೊತೆಗೆ ಎಲ್ಲಾ ನಿತ್ಯಾವಶ್ಯಕ ವಸ್ತುಗಳ ಬೆಲೆ ಕೂಡ ಏರಿಕೆಯಾಗುತ್ತೆ. ಕೃಷಿ, ಸಾರಿಗೆ ಮತ್ತು ಸಣ್ಣ ವ್ಯಾಪಾರಿಗಳ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಬೀರುತ್ತೆ. ಮಧ್ಯಮ ವರ್ಗ ಮತ್ತು ಬಡವರ ಕುಟುಂಬಗಳ ಆರ್ಥಿಕ ಸ್ಥಿತಿ ಅಂತೂ ತೀವ್ರವಾಗಿ ಹದಗೆಡುತ್ತಿದೆ. ದೇಶದ ಆರ್ಥಿಕತೆಗೆ ದೀರ್ಘಕಾಲೀನ ನಷ್ಟವೂ ಕೂಡ ಆಗುತ್ತಿದೆ" ಎಂದು ಭೋಗೇಶ್ ಸೋಲಾಪುರ್ ತಮ್ಮ ಅಸಮಾಧಾನವನ್ನ ಹೊರಹಾಕಿದರು.

"ಕೇಂದ್ರ ಸರ್ಕಾರವು ಜನಸಾಮಾನ್ಯರ ಹಿತವನ್ನು ಗಮನದಲ್ಲಿಟ್ಟುಕೊಂಡು ಈ ಬೆಲೆ ಏರಿಕೆಯನ್ನು ತಕ್ಷಣ ತಡೆಯಬೇಕು.

ಇಲ್ಲವಾದರೆ ಜನರು ಈ ಅನ್ಯಾಯವನ್ನು ಸಹಿಸುವುದಿಲ್ಲ" ಆಮ್ ಆದ್ಮಿ ಪಾರ್ಟಿ ಈ ವಿಷಯದಲ್ಲಿ ಜನರೊಂದಿಗೆ ನಿಂತು ಸತತ ಹೋರಾಟ ನಡೆಸುವುದಾಗಿ ಭೋಗೇಶ್ ಸೋಲಾಪುರ್ ಎಚ್ಚರಿಕೆ ನೀಡಿದರು.

# ವಿಜಯಪುರ ಜಿಲ್ಲೆಗೆ ಕೇಂದ್ರದಿಂದ 153 ಕೋಟಿ ರೂ. ಮಂಜೂರು

■ ಉದಯರಶ್ಮಿ ದಿನಪತ್ರಿಕೆ



**ವಿಜಯಪುರ ಲೋಕಸಭೆ ಸಂಸದರಾದ ರಮೇಶ ಜಿಗಜಿಣಗಿ ಹೇಳಿಕೆ**

ವಿಜಯಪುರ: ಕೇಂದ್ರ ಸರ್ಕಾರವು 2025–26ನೇ ಹಣಕಾಸು ವರ್ಷದಲ್ಲಿ ವಿಜಯಪುರಕ್ಕೆ ವಿವಿಧ ನಿರ್ಣಾಯಕ ಮೂಲಸೌಕರ್ಯ ಯೋಜನೆಗಳಿಗಾಗಿ ಆರ್ ಐಡಿ ನಬಾರ್ಡ್ ನಡಿ 153 ಕೋಟಿ ರೂ. ಮಂಜೂರು ಮಾಡಿದೆ ಎಂದು ಸಂಸದರಾದ ರಮೇಶ ಜಿಗಜಿಣಗಿ ಅವರು ತಿಳಿಸಿದ್ದಾರೆ.

ಈ ಕುರಿತು ಬುಧವಾರ ಪ್ರಕಟಣೆ ನೀಡಿರುವ ಅವರು, 2025–26ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅಭಿವೃದ್ಧಿಗಾಗಿ ಕಡಿಮೆ ವೆಚ್ಚದ ಸಾಲ ಸಹಾಯವಾಗಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿ ವಿಜಯಪುರ ಜಿಲ್ಲೆಗೆ 153.5 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ ಎಂದವರು ತಿಳಿಸಿದ್ದಾರೆ.

ಇಂಡಿ ತಾಲ್ಲೂಕಿನಲ್ಲಿ ಕೈಗಾರಿಕಾ–ಆಧಾರಿತ ಡಿಪ್ಲೊಮಾ, ಪೋಸ್ಟ್–ಡಿಪ್ಲೊಮಾ ಮತ್ತು ಎಂ.ಟೆಕ್ ಕಾರ್ಯಕ್ರಮಗಳನ್ನು ನೀಡಲು ಜಿಲ್ಲಾ ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು 70 ಕೋಟಿ ಮೌಲ್ಯದ ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ವಿದ್ಯಾರ್ಥಿಗಳು ಟೂಲ್ ಮತ್ತು ಡೈ ತಯಾರಿಕೆ, ಮೆಕಾಟ್ರಾನಿಕ್ಸ್ ಮತ್ತು ಸಿಎಡಿ, ಸಿಎಎಂ, ಸಿಎಎ ಹಾಗೂ ಎಐ ಕಲಿಯುತ್ತಾರೆ. ಶೈಕ್ಷಣಿಕ ಕಲಿಕೆ ಮತ್ತು ಕೈಗಾರಿಕಾ ಅಗತ್ಯಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ರೊಬೊಟಿಕ್ಸ್, ಆಟೋಮೊಬೈಲ್, ಆಧುನಿಕ ಸಿಎನ್ ಸಿ ಯಂತ್ರಗಳು. ಜಿಟಿಟಿಸಿ ಪ್ರಮುಖ ರಕ್ಷಣಾ ಮತ್ತು ಏರೋಸ್ಪೇಸ್ ಸಂಸ್ಥೆಗಳಿಗೆ ಹೆಚ್ಚಿನ ನಿಖರತೆಯ ಉಪಕರಣಗಳು, ಡೈಗಳು ಮತ್ತು ಘಟಕಗಳನ್ನು ತಯಾರಿಸುತ್ತದೆ ಎಂದರು.

ಸಿಂದಗಿಯಲ್ಲಿ ಕೋಲ್ಡ್ ಸ್ಟೋರೇಜ್, ತೊರವಿಯಲ್ಲಿ ಹೊಸ ಎಪಿಎಂಸಿ ಯಾರ್ಡ್ ಮತ್ತು ಮೂಲಸೌಕರ್ಯ ಮತ್ತು ತಾಳಿಕೋಟೆ ಎಪಿಎಂಸಿಯಲ್ಲಿ ಸಿಸಿ ರಸ್ತೆಗಳಿಗಾಗಿ ಆರ್‌ಐ–ಡಿಎಫ್‌ನಿಂದ ಎಪಿಎಂಸಿಗಳಿಗೆ 34.20 ಕೋಟಿ ಸಾಲ ನೆರವು ಮಂಜೂರು ಮಾಡಿದೆ ಎಂದವರು ತಿಳಿಸಿದ್ದಾರೆ.

ಮುದ್ದೇಬಿಹಾಳದ ಇಂಗಳೆರೆ ಮತ್ತು ಮಡಿಕೇಶ್ವರದಲ್ಲಿ ಎರಡು ಪಶು ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆ. ತೋಟಗಾರಿಕಾ ಇಲಾಖೆಯಡಿ, ಆಲಮೇಲ್ ನಲ್ಲಿ

ನಲ್ಲಿ ತೋಟಗಾರಿಕಾ ಕಾಲೇಜು ಸ್ಥಾಪನೆ ಮತ್ತು ವಿಜಯಪುರದಲ್ಲಿ ಒಣದ್ರಾಕ್ಷಿ, ಒಣ ದ್ರಾಕ್ಷಿ ಸಾಮಾನ್ಯ ಸೌಲಭ್ಯ ಕೇಂದ್ರದ ತಂತ್ರಜ್ಞಾನ ಮೇಲ್ದರ್ಜೆಗೆರಿಸಲು 48.6 ಕೋಟಿ ಮಂಜೂರು ಮಾಡಲಾಗಿದೆ. ಇದು ಜಿಲ್ಲೆಯ ಸಾವಿರಾರು ರೈತರಿಗೆ ಪ್ರಯೋಜನವಾಗಲಿದೆ ಎಂದು ಸಂಸದರಾದ ರಮೇಶ ಜಿಗಜಿಣಗಿ ತಿಳಿಸಿದ್ದಾರೆ.

ಆರ್‌ಐಡಿಎಫ್ ಜೊತೆಗೆ, ನಬಾರ್ಡ್ ತನ್ನ ನಬಾರ್ಡ್ ಮೂಲಸೌಕರ್ಯ ಅಭಿವೃದ್ಧಿ ನೆರವು ನಿಧಿಯಡಿ ವಿಜಯಪುರದಾದ್ಯಂತ ಶಿರಬೂರ್, ಕನಮಡಿ, ನಾದ್, ವನಹಳ್ಳಿ, ಹುಲ್ಲೂರು ಮತ್ತು ದಿಂಡವಾರ್ ಗಳಲ್ಲಿ 6 ಮುಂಗಡ ಉಪ ಕೇಂದ್ರಗಳನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್

ಪ್ರಸರಣ ನಿಗಮ ಲಿಮಿಟೆಡ್‌ಗೆ 80.54 ಕೋಟಿ ರೂ. ಸಾಲವನ್ನು ಮಂಜೂರು ಮಾಡಿದೆ. ಇದು ಹೈ–ವೋಲ್ಟೇಜ್ ಪ್ರಸರಣ ಮಾರ್ಗಗಳನ್ನು ನಿರ್ವಹಿಸುತ್ತದೆ. ಉತ್ಪಾದನಾ ಕೇಂದ್ರಗಳಿಂದ ವಿಜಯಪುರದ ಗ್ರಾಮೀಣ ಹಳ್ಳಿಗಳ ಸ್ಥಳೀಯ ವಿತರಣಾ ಕೇಂದ್ರಗಳಿಗೆ ವಿದ್ಯುತ್ ರವಾನಿಸುತ್ತದೆ ಎಂದವರು ತಿಳಿಸಿದ್ದಾರೆ.

ಮಾರ್ಚ್ 2026 ರ ಹೊತ್ತಿಗೆ, ಕೇಂದ್ರ ಸರ್ಕಾರವು ವಿಜಯಪುರದಲ್ಲಿ ನಬಾರ್ಡ್ ಮೂಲಕ ನಡೆಯುತ್ತಿರುವ 40 ಆರ್‌ಐಡಿಎಫ್ ಯೋಜನೆಗಳಿಗೆ ಸಹಾಯ ಮಾಡಿದೆ. ಜಿಲ್ಲೆಯ ವಿವಿಧ ಅಭಿವ ಇಲಾಖೆಗಳಿಗೆ 280.4 ಕೋಟಿ ಆರ್ಥಿಕ ನೆರವು ನೀಡಿದೆ ಎಂದು ಸಂಸದರಾದ ರಮೇಶ ಜಿಗಜಿಣಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಆಟೋ, 8250 ರೂ.ಮೌಲ್ಯದ ಅಕ್ಕಿ ವಶ

ಕಲಬುರಗಿ:ನಗರದ ಬಸವನಗರ ಧರ್ಮಶಾಲಾ ಎದುರುಗಡೆಯ ರಸ್ತೆಯ ಮೇಲೆ ಆಟೋದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಕಾಳಸಂತೆಯಲ್ಲಿ ಮಾರಾಟ ಮಾಡಲು ಸಾಗಾಣಿಕೆ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಫುಡ್ ಇನ್ಸಪೆಕ್ಟರ್ ಯಲ್ಲಾಲಿಂಗ ಕಡಕೂಳಕರ್,

ಅಶೋಕನಗರ ಪೊಲೀಸ್ ಠಾಣೆ ಇನ್ಸಪೆಕ್ಟರ್ ಸತೀಶ ಎನ್.ಕಣೀಮೇಶ್ವರ ಅವರು ದಾಳಿ ನಡೆಸಿ ಫಿಲ್ಟಬೆಡ್ ರಾಜೀವಗಾಂಧಿ ನಗರದ ರಾಹುಲ್ ತಂದೆ ಶ್ರೀಮಂತ ವಾಲಿಕಾರ (23) ವಶಕ್ಕೆ ಪಡೆದು 1 ಲಕ್ಷ ರೂ.ಮೌಲ್ಯದ ಆಟೋ ಮತ್ತು 45 ರಿಂದ 50 ಕೆ.ಜಿ.ತೂಕದ, 8250 ರೂ.ಮೌಲ್ಯದ 2.5 ಕ್ವಿಂಟಾಲ್ ಅಕ್ಕಿ ಜಪ್ತಿ ಮಾಡಿದ್ದಾರೆ. ಆಟೋ ಚಾಲಕ ರಾಹುಲ್ ವಾಲಿಕಾರ ವಿರುದ್ಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

# ಬೆಳೆ ಸಮೀಕ್ಷೆದಾರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಅಖಿಲ ಕರ್ನಾಟಕ ಬೆಳೆ ಸಮೀಕ್ಷೆದಾರರ ಸಂಘಟನೆಯ ತಿಕೋಟಾ ತಾಲೂಕಾ ಘಟಕದ ಪದಾಧಿಕಾರಿಗಳು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ತಿಕೋಟಾ ತಾಲೂಕಿನ ತಹಶೀಲ್ದಾರ್ ಮುಖಾಂತರ ಮುಖ್ಯಮಂತ್ರಿ ಸಿದ್ಧರಾಮಯ್ಯ ಇವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಪದಾಧಿಕಾರಿಗಳು, ಸುಮಾರು 8–10 ವರ್ಷಗಳಿಂದ ತಿಕೋಟಾ ತಾಲೂಕಿನಲ್ಲಿ 56 ಜನ ಬೆಳೆ ಸಮೀಕ್ಷೆದಾರರಾಗಿ ಕೆಲಸ ಮಾಡುತ್ತಾ ಬಂದಿರುವ ನಮಗೆ ಹಂಗಾಮುವಾರು ನಮ್ಮನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳದೇನೆ ಕನಿಷ್ಠ ವೇತನದ ನೀತಿ ಅಡಿಯಲ್ಲಿ ದಿನಗೂಲಿ ಕಾರ್ಮಿಕರನ್ನಾಗಿ ನೇಮಿಸಿಕೊಂಡು ವರ್ಷದ 12 ತಿಂಗಳುಗಳ ಕಾಲ ಕೆಲಸವನ್ನು ನೀಡುವಂತೆ ಆಗ್ರಹಿಸಲಾಯಿತು. ಈ ವೇಳೆ ತಾಲೂಕಾ ಅಧ್ಯಕ್ಷರಾದ ಭಾಗೇಶ ಮಲಕಪ್ಪ ರಾಮತೀರ್ಥ ಅವರು ಮನವಿ ಪತ್ರವನ್ನು ಸಲ್ಲಿಸಿದರು.

ವಿಶೇಷ ಅತಿಥಿಯಾಗಿ ಆಗಮಿಸಿದ ಸಂಘಟನೆಯ ರಾಜ್ಯ ಅಧ್ಯಕ್ಷ ಭೀಮಪ್ಪ ಲಕ್ಷ್ಮಣ ತಳವಾರ ಅವರು ಕೃಷಿ ಹಾಗೂ ಕಂದಾಯ ಇಲಾಖೆಯ ಅಧಿಕಾ–ರಿಗಳ ಜೊತೆ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಬೆಳೆ ಸಮೀಕ್ಷೆದಾರರಾದ ನಾವು 23,720 ಜನ ಕೆಲಸಗಾರರು ಕಾರ್ಯ ನಿರ್ವಹಿಸುತ್ತಿದ್ದೇವೆ. ನಮ್ಮ ಕೆಲಸಕ್ಕೆ ಸರ್ಕಾರ ನೀಡುವ ಸಂಬಳ ಯಾವ ವಿಧದಲ್ಲೂ ಸರಿಯಾದುದಲ್ಲ, ಯಾಕೆಂದರೆ ದರ ಪರಿಷ್ಕರಣೆ ಅನ್ನೋದು ಎಲ್ಲದರಲ್ಲೂ ಮಾಡಿರುವಿರಿ , ಆದರೆ ನಮಗೇಕೆ ಮಲತಾಯಿ ಧೋರಣೆ ಮಾಡುತ್ತಿರುವಿರಿ ಎಂದು ಮಾತನಾಡಿದರು. ಮನವಿಯನ್ನು ಸ್ವೀಕರಿಸಿದ ಕೃಷಿ ಅಧಿಕಾರಿಗಳು ಧನಾತ್ಮಕವಾಗಿ ಸಹಕ–ರಿಸಿದರು.

ಈ ಸಂದರ್ಭದಲ್ಲಿ ಅರುಣಕುಮಾರ ತಳವಾರ, ಬಂದೇ ನವಾಜ್ ಮುಲ್ಲಾ, ಚಂದನ ಕೋಳಿ, ನಾಗರಾಜ್ ಕೋರೆ,ಶಬ್ಬೀರ್ ಅತ್ತಾರ ಮತ್ತಿತರರು ಉಪಸ್ಥಿತರಿದ್ದರು.

# ಓವರ್ ಬ್ರಿಡ್ಜ್ ಕೆಳಗೆ ಅಂಡರ ಪಾಸ್ ಗೆ ಒತ್ತಾಯಿಸಿ ರೈತ ಸಂಘ ಮನವಿ

■ ಉದಯರಶ್ಮಿ ದಿನಪತ್ರಿಕೆ



**ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸುತ್ತಿರುವ ಸೇತುವೆ ಕೆಳಗೆ ಹೊಲಗಳಿಗೆ ಹೋಗಲು ದಾರಿ ಮಾಡುವಂತೆ ಆಗ್ರಹ**

ವಿಜಯಪುರ: ನಗರದ ಹೊರವಲಯದ ಬೆಂಗಳೂರ ಬೈಪಾಸಿನಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಅಪಘಾತಗಳು ಸಂಭವಿಸುತ್ತಿರುವುದರಿಂದ ಅಲ್ಲೊಂದು ಓವರ ಬ್ರೀಡ್ಜ ಮಾಡಬೇಕೆಂದು ಹಲವಾರು ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸಂಬಂಧಿಸಿದ ಅಧಿಕಾರಿಗಳಿಗೆ ಹಾಗೂ ಸಂಸದರಾದ ರಮೇಶ ಜಿಗಜಿಣಗಿ ಅವ–ರಿಗೆ ಮನವಿ ಸಲ್ಲಿಸಲಾಗಿತ್ತು. ಅದರ ಪ್ರತಿಫಲವಾಗಿ ಇಂದು ಓವರ್ ಬ್ರಿಡ್ಜ್ ಮಾಡಲಾಗುತ್ತಿದೆ. ಈ ಓವರ್ ಬ್ರಿಡ್ಜ್ ಕೆಳಗೆ ಅಂಡರ ಪಾಸ ಮಾಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ನಗರದ ಸಂಸದರಾದ ರಮೇಶ ಜಿಗಜಿಣಗಿ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡುತ್ತಾ, ಸಂಗಮೇಶ್ವರ ಆಸ್ಪರ್ತೆ ಹತ್ತಿರ ಅಂಡರ ಪಾಸ ಮಾಡಬೇಕು, ಇದರಿಂದ ಉತ್ನಾಳ ಗ್ರಾಮಕ್ಕೆ ನೇರವಾಗಿ ಹೋಗಲು ಅನುಕೂಲ ಆಗಲಿದೆ, ಜೊತೆಗೆ ವಾರ್ಡ ನಂಬರ 21, ಇಬ್ರಾಹಿಂಪುರ, ಗಣೇಶ ನಗರ, ತ್ರೀಮೂರ್ತಿ ನಗರ, ಕಾಸಗೇರಿ, ಸಾಯಿ ಪಾರ್ಕ, ಮುರಾಣ–ಕೇರಿ, ಮನಗೂಳಿ ಅಗಸಿ, ಸೇರಿದಂತೆ ಸಾವಿರಾರು ಎಕರೆ ಹೊಂದಿರುವ ರೈತರು ತಮ್ಮ ಜಮೀನುಗಳಿಗೆ ಹೋಗಲು ಎತ್ತಿನ ಗಾಡಿ ಹಾಗೂ ಟ್ರಾಕ್ಟರ್ ಕೊಂಡೊಯ್ಯಲು ಅನುಕೂಲವಾಗುತ್ತದೆ. ಒಂದು ವೇಳೆ ಸಂಗಮೇಶ ಆಸ್ಪತ್ರೆ ನೇರದಲ್ಲಿ ಅಂಡರ್ ಪಾಸ ಮಾಡದಿದ್ದಲ್ಲಿ ಎತ್ತಿನ ಗಾಡಿ ಹಾಗೂ ಟ್ರಾಕ್ಟರ್ ಗಳನ್ನು ಹಿಟ್ನಳ್ಳಿ ಟೋಲ ಸಮೀಪ ಹೋಗಿ ಮರಳಿ ಇತ್ತ ಕಡೆ ಬರಬೇಕಾಗುತ್ತದೆ, ಇದರಿಂದ ಟ್ರಾಫೀಕ ಸಮಸ್ಯೆ ಆಗುವುದರ ಜೊತೆಗೆ ಅಪಘಾತ ಕೂಡಾ ಸಂಭವವಿದೆ. ಆದ್ದರಿಂದ ಮಾನ್ಯ ಸಂಸದರು ಈ ಬಗ್ಗೆ ವಿಶೇಷ ಗಮನ ಹರಿಸಿ ರಾಷ್ಟರೀಯ ಹೆದ್ದಾರಿಯ ಮುಖ್ಯ ಅಧಿಕಾ–ರಿಗಳ ಗಮನಕ್ಕೆ ತಂದು ಅಂಡರ ಪಾಸ ಕಾಮಗಾರಿ ಮಾಡಿಕೊಡಬೇಕಾಗಿ ಮನವಿ ಮಾಡಿಕೊಂಡರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಾಮನಗೌಡ ಪಾಟೀಲ, ಜಿಲ್ಲಾ ಸಂಚಾಲಕರಾದ ಸಂಗಪ್ಪ ಟಕ್ಕೆ, ಮುಖಂಡರಾದ ಶಿವನಗೌಡ ನಾಡಗೌಡ, ಯಮನೂರಿ ಸಿಂದಗಿ ಸೇರಿದಂತೆ ಇತರರು ಇದ್ದರು,

# ಗೊಂದಲದ ಗೂಡಾದ ದಾಸಿಮಯ್ಯನ ದತ್ತಿ

## ಅಭಿಮತ

■ ಉದಯರಶ್ಮಿ ದಿನಪತ್ರಿಕೆ

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ದಿನಾಂಕ 12 ಏಪ್ರಿಲ್ 2026 ರಂದು ಶ್ರೀ ಪ್ರಸನ್ನ ರಾಮಚಂದ್ರ ಗೆದ್ದೆನ್ನವರ ಇವರ ದತ್ತಿ ಉಪನ್ಯಾಸವು ಒಂದು ಗೊಂದಲದ ಗೂಡನ್ನು ಸೃಷ್ಟಿಸಿ ಹಲವು ಅನುಮಾನ ಸಂದೇಹಗಳನ್ನು ಹುಟ್ಟು ಹಾಕಿದ ಪ್ರಸಂಗ ಉಪನ್ಯಾಸಕ ವಾಸುದೇವ ಬಡಿಗೇರ್ ಮತ್ತು ಅಧ್ಯಕ್ಷರಾದ ನಿವೃತ್ತ ಕನ್ನಡ ಪ್ರಾಧ್ಯಾಪಕ ಶ್ಯಾಮಸುಂದರ ಕೊಚ್ಚಿ ಅವರಿಂದ ಜರುಗಿತು.


ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಬೇರೆ ಬೇರೆ ಎನ್ನುವ ಕಳೆದ ಹನ್ನೆರಡು ವರುಷಗಳ ನಿರಂತರ ಹೋರಾಟಕ್ಕೆ ಈ ಇಬ್ಬರೂ ಮಹನೀಯರು ಮತ್ತೆ ಹಲವು ಅನೇಕ ಗೊಂದಲ ವಿವಾದಗಳನ್ನು ಸೃಷ್ಟಿಸಿದ್ದು ಒಂದು ಅರ್ಥದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಂತಹ 136 ವರ್ಷಗಳ ಹಳೆಯದಾದ ಇಂತಹ ಸಾಂಸ್ಕೃತಿಕ ಸಾಹಿತಿಕ ವೇದಿಕೆಗಳಲ್ಲಿ ಅತ್ಯಂತ ವಿವಾದಗಳನ್ನು ಹುಟ್ಟು ಹಾಕಿದ ರೀತಿ ಖಂಡನೀಯವಾದದ್ದು. ಇಂತಹ ಕಾರ್ಯಕ್ರಮಗಳು ವ್ಯಕ್ತಿಗಳ ಅಧ್ಯಯನಶೀಲತೆಯನ್ನು ಹೆಚ್ಚಿಸಬೇಕೆ ಹೊರತು ಸಂದೇಹ ಅನುಮಾನಗಳನ್ನು ಹುಟ್ಟು ಹಾಕುವುದಲ್ಲ.

ದೇವರ ದಾಸಿಮಯ್ಯ ಜೇಡರ ದಾಸಿಮಯ್ಯ ಏನಿದು ವಿವಾದ?

ಆದ್ಯ ವಚನಕಾರ ಜೇಡರ ದಾಸಿಮಯ್ಯರನ್ನು ಕೆಲ ಸಂಶೋಧಕರು ದೇವರ ದಾಸಿಮಯ್ಯ ಎಂದು ಹೇಳುತ್ತಾ ವಚನ ಚಳುವಳಿ ಬಸವಣ್ಣವರಕ್ಕಿಂತ 150 ವರ್ಷ ಮುಂಚೆ ಆರಂಭವಾಗಿದ್ದು ದೇವರದಾಸಿಮಯ್ಯನು ಈ ಚಳುವಳಿಯ ನಾಯಕ ಎಂದೆನ್ನುವ ಹುನ್ನಾರ ಮತ್ತು ಹುಂಬುತನದ ಕಾರ್ಯವಾಗಿದೆ.

ಇತಿಹಾಸ ಹೇಳುವಂತೆ ದೇವರ ದಾಸಿಮಯ್ಯನು ಪೊಟ್ಟಲ–ಕೆರೆಯ (ಆಂಧ್ರದ ಪಟಾಣ್‌ಚೆರುವು) ಜಯಸಿಂಹನ (ಸು. 1015[illegible]44) ಪತ್ನಿ ಸುಗ್ಗಲದೇವಿಗೆ ಶಿವ ದೀಕ್ಷೆಯನ್ನು ಕೊಟ್ಟವನು; ಮತ ಪ್ರಚಾರಕ. ಸದ್ಯಕ್ಕೆ ಆದ್ಯ ವಚನಕಾರ ಜೇಡರದಾಸಿಮಯ್ಯನು ನೇಯ್ಗೆಯವನು; ಕಲಬುರ್ಗಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮುದನೂರಿನವನು; ಇಲ್ಲಿ ರಾಮೇಶ್ವರ ದೇವಾಲಯವಿದೆ; ಇವನ ವಚನಗಳ ಅಂಕಿತ ರಾಮನಾಥ. ಇವನಂತೆ ಇವನ ಪತ್ನಿ ದುಗ್ಗಳೆ ವಚನಕಾರ್ತಿ. ಇವನು ಆರನೇ ವಿಕ್ರಮಾದಿತ್ಯನ ಮೊಮ್ಮಗ ಎರಡನೇ ಜಗದೇಕಮಲ್ಲನ (1139[illegible]1149) ಕಾಲದಲ್ಲಿದ್ದವನು. ಬಸವಣ್ಣನವರ ಹಿರಿಯ ಸಮಕಾಲೀನ.

ಇವನ ವಚನಗಳಲ್ಲಿ ಆ ಕಾಲದ ಸಾಮಾಜಿಕ ಸಂಗತಿಗಳ ಪ್ರಸ್ತಾಪ ಹೇರಳವಾಗಿ ಬಂದಿದೆ. ಇವನು ಶ್ರೇಷ್ಠ ಚಿಂತಕ, ಅನುಭಾವಿ, ವಿಡಂಬನಕಾರ, ವಚನಗಳ ಕಾವ್ಯಮೌಲ್ಯ ವಿಶಿಷ್ಟವಾಗಿದೆ. ಶಿವನು ಇವನ ಮನಸ್ಸನ್ನು ಒರೆಹಚ್ಚಿ ನೋಡಿದ ಪ್ರಸಂಗ ಬಸವಣ್ಣನವರ ವಚನಗಳಲ್ಲಿ ಬಂದಿದೆ. ಅವರ ವಚನಗಳಲ್ಲಿ ಸುಮಾರು 14 ಕಡೆ ಜೇಡರ ದಾಸಿಮಯ್ಯನ ಉಲ್ಲೇಖ ಬಂದಿದೆ. ಇವನು ಶಿವನಿಂದ ತವನಿಧಿಯನ್ನು ಪಡೆದಿದ್ದನೆಂದೂ, ಇವನ ಅಹಮ್ಮನ್ನು ಇಲ್ಲವಾಗಿಸಲು ಶಂಕರದಾಸಿಮಯ್ಯನು ತವನಿಧಿಯನ್ನು ಮಾಯ ಮಾಡಿದ ಘಟನೆ ಹರಿಹರನ ಶಂಕರದಾಸಿಮಯ್ಯನ ರಗಳೆಯಲ್ಲಿ ಬಂದಿದೆ.



People called him Devara Dasimayya —

ಜೇಡರ ದಾಸಿಮಯ್ಯನ ಒಂದು ವಚನದಲ್ಲಿ (ಸಂಕೀವ ಸಂ. 2, ವ. 29, 2001) ನೇಯ್ಗೆಯ ಸಾಧನಗಳ ವಿವರ ಬಂದಿದೆ. ಉದಾ. ಗೆ ಉಂಕೆ=ನೂಲಿನ ಹಾಸು; ಅಣಿ=ಅಣಿದಬ್ಬೆ, ನೇಯ್ಗೆಯ ಪರಿಕರ; ಲಾಳಿ=ನೇಯ್ಗೆಯಲ್ಲಿ ಬಳಸುವ ಒಂದು ಉಪಕರಣ. ಮಗ್ಗದಲ್ಲಿ ಹೊಕ್ಕಿನ ದಾರವನ್ನು ಸೇರಿಸುವ ಸಾಧನ; ಕಂಡಿಕೆ=ಲಾಳಿಯಲ್ಲಿ ಸೇರಿಸುವ ನೂಲಿನ ಉಂಡೆ; ಸೀರೆ=ವಸ್ತ್ರ. ಈ ವೃತ್ತಿ ಪಾರಿಭಾಷಿಕ ಪದಗಳಿಂದ ಇವನು ನೇಯ್ಗೆಯವನು/ಮಗ್ಗದವನು/ ದೇವಾಂಗ ಸಮುದಾಯಕ್ಕೆ ಸೇರಿದವನೆಂಬುದು ಸ್ಪಷ್ಟವಾಗುತ್ತದೆ. ಹೀಗಿರುವಾಗ ದೇವಾಂಗ ಸಮುದಾಯಕ್ಕೆ ಸೇರದ ಕೇವಲ ಮತಪ್ರಚಾರಕ್ಕೆ, ಊರೂರು ಅಲೆಯುತ್ತಿದ್ದ ಸನ್ಯಾಸಿ ದೇವರ ದಾಸಿಮಯ್ಯನನ್ನು ಸಂಸಾರಸ್ಥನಾಗಿದ್ದ ದೇವಾಂಗ (=ಮಗ್ಗ (ಅ) ನೇಯ್ಗೆ ಕಾಯಕದವನಾದ (ಉತ್ತರ ಕರ್ನಾಟಕದಲ್ಲಿ ಇವರನ್ನು ಸಾಲೇರು ಸಕುಳ ಸಾಲಿ ಹಟಗಾರ ನೇಕಾರ ಜಾಡರು ಎಂದು ಕರೆಯುವರು).

ಬಸವಣ್ಣನವರ ಒಂದು ವಚನದಲ್ಲಿ (589) 'ಹಾಸನಿಕ್ಕಿ ಸಾಲಿಗನಾದ' ಅಂದರೆ, ವಸ್ತ್ರವನ್ನು ನೇಯುವ ಕಾಯಕದಿಂದ ಸಾಲಿಗ (ಸಾಲೇರು) ಜಾತಿಯನ್ನು ಹೊಂದಿದ ಎಂದು ಬಂದಿದೆ. ಇನ್ನೊಂದು ವಚನದಲ್ಲಿ – ಭಕ್ತಿಯಿಲ್ಲದ ಬಡವ ನಾನಯ್ಯ ದಾಸಯ್ಯನ ಮನೆಯಲೂ ಬೇಡಿದೆ ಚೆನ್ನಯ್ಯನ ಮನೆಯಲೂ ಬೇಡಿದೆ ಕಕ್ಕಯ್ಯನ ಮನೆಯಲೂ ಬೇಡಿದೆ ಅವರೆಲ್ಲರೂ ನೆರೆದು ತಮ್ಮ ಭಕ್ತಿಯ ಭಿಕ್ಷೆಯನ್ನಿಕ್ಕಿದರು ಎನ್ನ ಪಾತ್ರೆ ತುಂಬಿತ್ತು ಕೂಡಲ ಸಂಗಮದೇವಾ ಎನ್ನುವಲ್ಲಿ ದಾಸಿಮಯ್ಯ ಬಸವಣ್ಣನವರ ಸಮಕಾಲೀನ ಎಂದು ಸ್ಪಷ್ಟವಾಗಿ ಗೋಚರವಾಗುತ್ತದೆ. ಹೀಗಾಗಿ ಅವನು ಜೇಡರ ದಾಸಿಮಯ್ಯನೇ ಹೊರತು ದೇವರ ದಾಸಿಮಯ್ಯನಲ್ಲ.

ದೇವರ ದಾಸಿಮಯ್ಯ/ಜೇಡರ ದಾಸಿಮಯ್ಯ ಒಬ್ಬರೇ ಆದರೆ, ಇಬ್ಬರೂ ಬೇರೆ ಬೇರೆ ಕಾಲಮಾನದಲ್ಲಿದ್ದವರು; ವೃತ್ತಿಯಲ್ಲಿ ಬೇರೆ ಬೇರೆಯವರು; ಒಬ್ಬ ಸನ್ಯಾಸಿ, ಇನ್ನೊಬ್ಬ ಸಂಸಾರಿ ಎಂಬುದನ್ನು ಹೇಗೆ ಸಮರ್ಥಿಸುವುದು? ದೇವರ ದಾಸಿಮಯ್ಯನ ಪತ್ನಿ ದುಗ್ಗಳೆ ಎಂದು ಹೇಳುವುದಾದರೆ ಇದಕ್ಕಿಂತ ಅಪಚಾರ ಬೇರೊಂದಿದೆಯೆ? ಸಂಶೋಧಕನದು ಈಗಾಗಲೇ ತೋಡಿರುವ ಸಂದೇಹ ವಿವಾದಗಳ ಗುಂಡಿಯನ್ನು ಮುಚ್ಚ ಬೇಕೇ ವಿನಃ ; ಗುಂಡಿಗಳನ್ನು ತೋಡುವುದೇ ಸಂಶೋಧನೆ ಕೆಲಸವಾಗಬಾರದು. ಇಂತಹ ವಿವಾದಗಳ ಗುಂಡಿಗಳನ್ನು ಮುಚ್ಚುತ್ತಾ ಹೋಗುವುದೇ ನಮ್ಮ ಕೆಲಸವಾದರೆ ಇದಕ್ಕೆ ಕೊನೆಯೆಲ್ಲಿ?




ಹರಿಹರನ ಶಂಕರ ದಾಸಿಮಯ್ಯನ ರಗಳೆಯಲ್ಲಿ ಜೇಡರ ದಾಸಿಮಯ್ಯ ಮತ್ತು ದುಗ್ಗಳೆಯರು ಸತಿ ಪತಿಯರೆಂದೇ ಉಲ್ಲೇಖಿ–ತರಾಗಿದ್ದಾರೆ. ಅವರಿಬ್ಬರದೂ ಅತ್ಯಂತ ಸುಖಮಯ ಸಂಸಾರವಾಗಿ–ತ್ತು. ದುಗ್ಗಳೆ ತನ್ನ ವಚನಗಳಲ್ಲಿ ಬಸವ, ಚನ್ನಬಸವ, ಅಲ್ಲಮರನ್ನು ಸ್ತೋತ್ರ ಮಾಡಿದ್ದಾಳೆ ('ಭಕ್ತನಾದಡೆ ಬಸವಣ್ಣ ನಂತಾಗಬೇಕು. ಜಂಗಮನಾದರೆ ಪ್ರಭುದೇವರಂತಾಗಬೇಕು. ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು') ಎಂದರೆ ದುಗ್ಗಳೆ, ಜೇಡರ ದಾಸಿಮಯ್ಯರು ಬಸವಣ್ಣ, ಅಲ್ಲಮ ಇವರ ಸಮಕಾಲೀನರು: ಅವರ ಕಾಲ ಸ್ಪಷ್ಟವಾಗಿ ಕ್ರಿ.ಶ. 1160: ಬಸವಣ್ಣ ಆ ಕಾಲದಲ್ಲಿ ಆಳಿದ ಬಿಜ್ಜಳನ ಭಂಡಾರಿ.

ದೇವರ ದಾಸಿಮಯ್ಯನ ಕಾಲ ಕ್ರಿ. ಶ. 1040; ಜೇಡರ ದಾಸಿಮಯ್ಯನ ಕಾಲ ಕ್ರಿ. ಶ. 1140 ರಿಂದ 1160 ಎಂದು ನಿರ್ಧಾರವಾಗುತ್ತದೆ . ಇವರಿಬ್ಬರೂ ಬೇರೆ ಬೇರೆ ಎಂಬುದನ್ನು (ದಿ.) ಎಚ್. ದೇವೀರಪ್ಪನವರು ಸ್ಪಷ್ಟಪಡಿಸಿದ್ದಾರೆ. ಹಸ್ತಪ್ರತಿಗಳಲ್ಲಿ 'ಜೇಡರ ದಾಸಿಮಯ್ಯನ ವಚನಗಳು' ಎಂದು ಮಾತ್ರ ಇದೆ. ಶ್ರೇಷ್ಠ ವಿದ್ವಾಂಸರಾದ ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ, ಡಾ ಎಂ ಚಿದಾನಂದ ಮೂರ್ತಿ, ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ, ಡಾ. ಎಂ. ಎಂ. ಕಲಬುರ್ಗಿ, ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ, ಡಾ. ಎನ್. ವಿದ್ಯಾಶಂಕರ್ ಮುಂತಾದ ಅನೇಕ ಸಂಶೋಧಕರು ಇವರೆಲ್ಲರೂ ಜೇಡರ ದಾಸಿಮಯ್ಯ ಮತ್ತು ದೇವರ ದಾಸಿಮಯ್ಯ ಇಬ್ಬರೂ ಬೇರೆ ಬೇರೆ ಇವರ ಕಾಲ ಘಟ್ಟವು ಬೇರೆ ಎಂದು ಸ್ಪಷ್ಟವಾಗಿ ನಿರೂಪಿಸಿದ್ದಾರೆ.

### ಸಂಶೋಧನೆ ನಿಂತ ನೀರಲ್ಲ

ಡಾ ಎಂ ಎಂ ಕಲಬುರ್ಗಿ ಗುರುಗಳು ಸಂಶೋಧನೆ ನಿಂತ ನೀರಲ್ಲ, ಕಾಲ ಕೆಳಗಿನ ಕೆಂಡಕ್ಕಿಂತ ಕಣ್ಣ ಮುಂದಿನ ಬೆಳಕು ಮುಖ್ಯ, ಸತ್ಯ ಶೋಧಕ ನಿತ್ಯ ಶಿಲುಬೆಗೆ ಇರಬೇಕಾಗುತ್ತದೆ, ಸಂಶೋಧಕ ತಪ್ಪು ಹೇಳಿರಬಹುದು ಆದರೆ ಸುಳ್ಳು ಹೇಳಿರಲಾರ, ಎಂಬ ಅನೇಕ ಸ್ವಂತ ಅನುಭವದ ಮಾತುಗಳನ್ನು ಆಡಿದ್ದಾರೆ. ಡಾ ವಾಸುದೇವ ಬಡಿಗೇರ ಡಾ ಎಂ ಎಂ ಕಲಬುರ್ಗಿ ಅವರಿಗೆ ದೇವರ ದಾಸಿಮಯ್ಯನ ಬಗ್ಗೆ ಪ್ರಸ್ತಾಪ ಮಾಡಿದೆ, ಆಗ ಅವರು ನನಗೆ ಆಕಾರ ಶಾಸನಗಳ ಕೊರತೆಯಿದೆ ಅಂತಹ ಕೆಲಸ ನಿನ್ನಿಂದ ಆಗಬೇಕು ಎಂದು ಹೇಳಿದರಂತೆ ಎಂದು 12 ರಂದು ವಿದ್ಯಾವರ್ಧಕ ಸಂಘದಲ್ಲಿ ನಡೆದ ಉಪನ್ಯಾಸದಲ್ಲಿ ಹೇಳಿದರು. ಇದು ಒಂದು ಹಾಸ್ಯಾಸ್ಪದದ ಸ್ವಯಂ ಹೊಗಳಿಕೆಯ ಪರಾಕಾಷ್ಠೆ, ಡಾ ಎಂ ಚಿದಾನಂದ ಮೂರ್ತಿ, ಡಾ ಎಂ ಎಂ ಕಲಬುರ್ಗಿ ಅವರ ಸಂಶೋಧನೆಯ ಅನುಭವ ವಾಸುದೇವ ಬಡಿಗೇರ ಅವರ ವಯಸ್ಸಿಗಿಂತ ಹೆಚ್ಚಿನದು, ನಿವೃತ್ತಿಯ ನಂತರವೂ ಸಂಶೋಧನೆಯನ್ನು ಉಸಿರನ್ನಾಗಿ ಕಂಡುಕೊಂಡವರು ಡಾ ಎಂ ಎಂ ಕಲಬುರ್ಗಿ ಗುರುಗಳು, ಅವರನ್ನು ಕಡಿಮೆ ಮಾಡಿ ಅವರಿಗಿಂತ ಮತ್ತು ಉಳಿದ ಸಂಶೋಧಕರಿಗಿಂತ ವಾಸುದೇವ ಬಡಿಗೇರ ತಾವು ಶ್ರೇಷ್ಠ ಸಂಶೋಧಕರು ಎನ್ನುವ ಭ್ರಮೆಯಲ್ಲಿದ್ದಾರೆ. ಸಂಶೋಧನೆ ನಿಂತ ನೀರಲ್ಲ ಸತ್ಯ ಆದರೆ ಕೊಳಚೆ ನೀರಾಗಬಾರದು. ವಾಸುದೇವ ಬಡಿಗೇರ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಇತಿಹಾಸದ ಸಂಶೋಧಕರು, ಸುಳ್ಳನ್ನು ನವಿರಾಗಿ ಹೇಳುವ ಕಲೆಯನ್ನು ಕರಗತ ಮಾಡಿಕೊಂಡವರು, ಮೂರು ವರುಷದ ಹಿಂದೆ ಈ ಮಹಾನ್ ಸಂಶೋಧಕರಿಗೆ ಫೋನ್ ಮಾಡಿ ಮಾತನಾಡಿದ್ದೆ, ತಮ್ಮ ಮೊಂಡುತನ ಕಲ್ಪನೆ ಗ್ರಹಿಕೆಗಳನ್ನೇ ಸಂಶೋಧನೆಯೆಂದು ತಿಳಿದಿರುವ ವಾಸುದೇವ ಬಡಿಗೇರ ಅವರಿಗೆ ಸಮಕಾಲೀನ ಅಥವಾ ಹಿರಿಯ ಸಂಶೋಧಕರ ಸಂಶೋಧನೆಗಳ ಬಗ್ಗೆಯೂ ಅವಲೋಕನ ಮಾಡಲಿ, ವಾಸುದೇವ ಬಡಿಗೇರ ಅವರು ಕೇವಲ ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಇವರ ಬಗ್ಗೆಯಾಗಿರದೆ ಮಾದಾರ ಚೆನ್ನಯ್ಯ ಮೂರನೆಯ ಶತಮಾನಾದವರೆಂಬ ಇನ್ನೊಂದು ಹಸಿ ಶುದ್ಧ ಸುಳ್ಳನ್ನು ಉಪನ್ಯಾಸದಲ್ಲಿ ಹೇಳಿದ್ದಾರೆ. ಚೋಳರಲ್ಲಿ ಕ್ರಿಸ್ತ ಶಕ ಪೂರ್ವದ ಅಶೋಕನ ಶಾಸನಗಳಲ್ಲಿ ತಮಿಳರ ಚೋಳರ ಬಗ್ಗೆ ಉಲ್ಲೇಖವಿದ್ದರೂ ಸಹಿತ ಮಧ್ಯಕಾಲೀನ ಇತಿಹಾಸದಲ್ಲಿ ಅದು ಕ್ರಿಸ್ತ ಶಕ 848 ರಲ್ಲಿ ಎಂದು ಆರಂಭವಾಗುತ್ತದೆ, ಕಕ್ಕಯ್ಯ ವಚನಾಕಾರನು 9 ನೇ ಶತಮಾನದವನೆಂದು ಹೇಳಿದ್ದು, ಕೆಂಭಾವಿ ಬೋಗಣ್ಣ ಕುಂಬಾರ ಗುಂಡಯ್ಯ ಶಂಕರ ದಾಸಿಮಯ್ಯ ಇವರೆಲ್ಲರೂ ಬಸವ ಪೂರ್ವಯುಗದ ಶರಣರು ಎಂದು ಯಾವುದೇ ಆಧಾರವಿರದೆ ಬುರುಡೆ ಬಿಟ್ಟರು. ಡಾ ಪಿ ವಿ ನಾರಾಯಣ ಅವರ ಉಲ್ಲೇಖವನ್ನು ಪ್ರಸ್ತುತಪಡಿಸುತ್ತ ದಾಸಿಮಯ್ಯನವರ ವಚನಗಳು ಬಸವ ಪೂರ್ವ ಎನ್ನಲೂ ಸಾಧ್ಯವಿಲ್ಲ ಎಂದು ಹೇಳಿದ್ದು ವಾಸುದೇವ ಅವರ ಮಾನಸಿಕ ಗೊಂದಲವನ್ನು ತೋರಿಸುತ್ತದೆ.

ದೇವರ ದಾಸಿಮಯ್ಯನವರ ಬಗೆಗಿನ ವಾಸುದೇವ ಬಡಿಗೇರ ಅವರ ಆಧಾರಗಳೇನು ?

16 ಮತ್ತು 17 ನೆಯ ಶತಮಾನದ ಅದೃಶ್ಯ ಕವಿ ಮತ್ತು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದ ಕರ್ತಾ ಶಾಂತಲಿಂಗ ದೇಶಿಕರ ಪವಾಡಗಳು, ವಿಚಿತ್ರದ ಸಂಗತಿಯೆಂದರೆ ವಾಸುದೇವ ಬಡಿಗೇರ ಅವರು ಪುರಾಣ ಪವಾಡಗಳನ್ನು ಆಕರ ಎಂದು ಪರಿಗಣಿಸಲಾಗುವುದಿಲ್ಲ ಎಂದೆನ್ನುತ್ತಲೇ ಇಂತಹ ವಿಷಯಗಳನ್ನು ಪ್ರಸ್ತಾಪ ಮಾಡಿದ್ದು ನಗೆ ಪಾಟಲಿಗೆ ಎಡೆ ಮಾಡಿತು, ವಿಶ್ವ ವಿದ್ಯಾಲಯದ ಈ ಪ್ರಾಧ್ಯಾಪಕರಿಗೆ ವಚನ ಸಾಹಿತ್ಯದ ಅಧ್ಯನದ ಕೊರತೆ ಇರಬಹುದು ಎಂದು ತಿಳಿದುಕೊಂಡಿದ್ದೆ, ಆದರೆ ಅವರ ಇತಿಹಾಸದ ಪ್ರಜ್ಞೆ ಮತ್ತು ಅಧ್ಯಯನದ ಕೊರತೆಯೂ ಎದ್ದು ಕಾಣುತ್ತಿತ್ತು. ಕಕ್ಕಯ್ಯ 9 ನೆಯ ಶತಮಾನದವನು ಎನ್ನುವ ಇವರಿಗೆ ಖಾನಾಪುರ ತಾಲೂಕಿನ ಕಕ್ಕೇರಿಯಲ್ಲಿರುವ ಕಕ್ಕಯ್ಯನ ಬಿಷ್ಟಾದೇವಿಯ ಸಮಾಧಿ ಸುಳ್ಳೇ ? ಕ್ಷೇತ್ರ ಕಾರ್ಯ ಭೌಗೋಲಿಕ ಆಕಾರ ಮತ್ತು ವಚನಗಳನ್ನು ಪರಿಗಣಿಸಬೇಕೆನ್ನುವ ವಾಸುದೇವ ಬಡಿಗೇರ ಅವರು ಏನೇನೋ ಕಲ್ಪಿಸಿ ಇತಿಹಾಸವನ್ನು ಹಿಗ್ಗಾ ಮುಗ್ಗಾ ಜಗ್ಗಾಡಿ ಶರಣ ಸಂಸ್ಕೃತಿಗೆ ಅಪಮಾನ ಮಾಡಿದ್ದಾರೆ.

ವಿದ್ಯಾವರ್ಧಕ ಸಂಘದಲ್ಲಿ ಇನ್ನೊಂದು ಬಹು ಚರ್ಚಿತ ಗೊಂದಲವೆಂದರೆ ಇನ್ನೊಬ್ಬ ಕನ್ನಡ ನಿವೃತ್ತ ಪ್ರಾಧ್ಯಾಪಕ ಡಾ ಶಾಮಸುಂದರ ಕೊಚ್ಚಿ ಇವರು ತಮ್ಮ ಅಧ್ಯಕ್ಷೀಯ ಭಾಷಣವನ್ನು ಮಾಡದೆ ಇನ್ನೊಂದು ಮಿನಿ ಉಪನ್ಯಾಸ ಮಾಡುತ್ತಾ ಲಿಂಗಾಯತ ಬಣಜಿಗರಿಗೆ ಲಿಂಗ ದೀಕ್ಷೆ ಕೊಟ್ಟವರೇ ದೇವಾಂಗದವರು ಎಂಬ ಶುದ್ಧ ಹಸಿ ಸುಳ್ಳನ್ನು ಹೇಳಿದ್ದು ಸಭೆಯಲ್ಲಿ ಬಸವಂತಪ್ಪ ತೋಟದ, ಮಹಾಂತೇಶ ನರೇಗಲ್, ಅನಿಲ ಅಂಗಡಿ ಮುಂತಾದವರಿಂದ ಸ್ವಲ್ಪ ಮಟ್ಟಿಗೆ ಪ್ರತಿ ರೋಧ ಬಂತು. ಹೀಗೆ ಒಂದು ಲಿಂಗಾಯತ ಸಮುದಾಯವನ್ನು ಗುರಿ ಮಾಡಿಕೊಂಡು ಕೊಚಿಯವರ ಸರಸ್ವತಿಕ ಲೋಕದಲ್ಲಿ ಕೊಚ್ಚಿಯಲ್ಲಿ ಕಲ್ಲು ಎಸೆದು ಮತ್ತಷ್ಟು ಗಬ್ಬು ಎಬ್ಬಿಸಬಾರದು. ಅವರು ಮಾತಾಡಿದ್ದು ದುರುದ್ದೇಶದ ಯೋಜನೆಯಾಗಿರಬಹುದು. ಇಂತಹ ವಿವಾದಾಸ್ಪದ ಉಪನ್ಯಾಸಗಳನ್ನು ಸಂಯೋಜಕರು ಬಲು ಎಚ್ಚರದಿಂದ ಸಂಘಟಿಸಲಿ.

### ಕೆಲವರ ಜಾಣ ಮೌನ

ಈ ವಿಷಯವನ್ನು ನಾನು ಶ್ರೀ ಶಂಕರ ಹಲಗತ್ತಿ, ಶ್ರೀ ಶಂಕರ ಕುಂಬಿ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಅವರಿಗೆ ಮೊದಲೇ ತಿಳಿಸಿದ್ದೆ. ಆದರೆ ಬಸವ ಸಮಿತಿಯ ಡಾ ಅರವಿಂದಣ್ಣ ಜತ್ತಿ, ಖ್ಯಾತ ಸಂಶೋಧಕ ಡಾ ವೀರಣ್ಣ ರಾಜೂರ ಅವರು ಮೌನಕ್ಕೆ ಜಾರಿದರು. ನಾನೂ ಕೂಡ 30 ವರ್ಷಗಳ ಹಿಂದೆ ದೇವರ ದಾಸಿಮಯ್ಯ ಮತ್ತು ಜೇಡರಾವ್ ದಾಸಿಮಯ್ಯ ಇಬ್ಬರೂ ಒಬ್ಬರೇ ಎಂದು ತಿಳಿದುಕೊಂಡವನು. ಒಮ್ಮೆ ಡಾ ಎಚ್ ಚಂದ್ರಶೇಖರ ಖ್ಯಾತ ಭೂಗರ್ಭ ವಿಜ್ಞಾನಿ ಮತ್ತು ಡಾ ಎಂ ಎಂ ಕಲಬುರ್ಗಿ ಗುರುಗಳ ಆಪ್ತ ನನಗೆ ಫೋನ್ ಮಾಡಿ ಇವರಿಬ್ಬರೂ ಬೇರೆ ಬೇರೆ ಎಂದು ತಿಳಿಸಿದರು. ಅದೇ ರೀತಿ ಡಾ ಎಂ ಚಿದಾನಂದ ಮೂರ್ತಿ ಸರ್ ಮತ್ತು ಡಾ ಎಸ್ ವಿದ್ಯಾಶಂಕರ ಅವರೊಂದಿಗೆ ಹಲವು ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಸಹಿತ ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಇಬ್ಬರೂ ಬೇರೆ ಬೇರೆ ಎನ್ನುವಲ್ಲಿ ನಾವು ಪರಸ್ಪರ ಚರ್ಚಿಸಿದ್ದೆವು. ಅದೇ ರೀತಿ ಸಂಶೋಧನೆಗಳಲ್ಲಿ ಸಣ್ಣ ತಪ್ಪು ಕಂಡು ಬಂದರೂ ಸಹಿತ ಅದನ್ನು ತಿದ್ದಿಕೊಳ್ಳುವ ಕಾರ್ಯವನ್ನು ಡಾ ಎಂ ಎಂ ಕಲಬುರ್ಗಿ ಅವರು ಮಾಡುತ್ತಿದ್ದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಸತೀಶ್ ತುರಮರಿ ಶಿವಾನಂದ ಭಾವಿಕಟ್ಟಿ ಮುಂತಾದವರ ಜೊತೆಗೆ ಮಾತನಾಡಿದ್ದೇನೆ. ವಾಸುದೇವ ಬಡಿಗೇರ ಅವರು ಅವರ ಪುಸ್ತಕವನ್ನು ಒಮ್ಮೆ ಓದಲು ಸಲಹೆ ನೀಡಿದ್ದಾರೆ. ಆದರೆ ಅವರ ಕಪೋಲ ಕಲ್ಪಿತ ಗ್ರಹಿಕೆ ಪ್ರಮಾದಗಳ ವಿಷಯಗಳನ್ನು ಅವರ ಉಪನ್ಯಾಸದಲ್ಲಿ ಕೇಳಿದ ಮೇಲೆ ಆ ಪುಸ್ತಕು ಎಂತಹುದು ಇರಬಹುದು ಎಂದು ಗೊತ್ತಾಗುತ್ತದೆ.

ವಾಸುದೇವ ಬಡಿಗೇರ ಅವರು ನನಗೆ ದಾಖಲೆ ಕೊಡಲು ಹೇಳಿದ್ದಾರೆ. ಈ ಕೆಳಗಿನ ದಾಖಲೆ ಕೊಡುವುದಲ್ಲದೆ ತಾವು ಇಚ್ಚಿಸಿದಲ್ಲಿ ಚರ್ಚೆಗೆ ಬರಲು ನಾನು ಸಿದ್ಧ. ಇಂತಹ ಚರ್ಚೆಯು ಸೋಲು ಗೆಲುವು ಎಂದಾಗದೆ ಸತ್ಯದ ಚರಿತ್ರೆಯ ಸ್ಥಾಪನೆಯಾಗ ಬೇಕು. ನಮ್ಮ ಹೊಸ ಶೋಧಗಳು ಲಿಂಗ ಮೆಚ್ಚಿ ಅಹುದಹುದೆನ್ನ ಬೇಕು. ಇನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ಇಂತಹ ಸೂಕ್ಷ್ಮಾತಿ ಸೂಕ್ಷ್ಮ ವಿಷಯಗಳ ಬಗ್ಗೆ ಉಪನ್ಯಾಸವನ್ನು ಸಂಘಟಿಸುವಲ್ಲಿ ಸ್ವಲ್ಪ ಎಚ್ಚರ ಕಾಳಜಿಯನ್ನು ವಹಿಸ ಬೇಕೆಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಸರ್ವ ಪದಾಧಿಕಾರಿಗಳಲ್ಲಿ ವಿನಮ್ರವಾಗಿ ವಿನಂತಿಸುತ್ತೇನೆ. ಅದೇ ರೀತಿ ಕನ್ನಡದ ಅಸ್ಮಿತೆ ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಕುಲಪತಿಗಳಾದ ಡಾ ಪರಮಶಿವಯ್ಯ ಮತ್ತು ಕುಲ ಸಚಿವರಾದ ಡಾ ವಿರುಪಾಕ್ಷಿ ಪೂಜಾರಹಳ್ಳಿ ಅವರು ಇಂತಹ ವಿವಾದಾಸ್ಪದ ಕೃತಿಗಳನ್ನು ನಿಗ್ರಹಿಸಿರಿ. ಸತ್ಯಾಸತ್ಯತೆ ಹೊರಬರಲಿ ಆದರೆ ಇಂತಹ ಅರ್ಥವಿರದ ಗೊಂದಲ ಸೃಷ್ಟಿಸುವ ಕೃತಿಗಳು ಕನ್ನಡ ವಿಶ್ವ ವಿದ್ಯಾಲಯಕ್ಕೆ ಕಪ್ಪು ಚುಕ್ಕೆ ತಾರದಿರಲಿ. ಡಾ ವಾಸುದೇವ ಬಡಿಗೇರ ಅವರು ಇನ್ನೂ ಮುಂದಾದರೂ ಇಂತಹ ವಿವಾದಗಳ ದುಸ್ಸಾಹಸಕ್ಕೆ ಕೈ ಹಾಕದಿರಲೆಂದು ಅವರಲ್ಲಿ ಕೋರುತ್ತೇನೆ. ಶ್ರೀ ಪ್ರಸನ್ನ ರಾಮಚಂದ್ರ ಗೆದ್ದೆನ್ನವರ ಅವರ ದತ್ತಿಯ ಬಗ್ಗೆ ಇನ್ನೊಮ್ಮೆ ಆಲೋಚನೆ ಮಾಡಿ ನಿರ್ಧರಿಸಲಿ, ನನಗೆ ಶಿವ ಭಕ್ತ ದೇವರ ದಾಸಿಮಯ್ಯನವರ ಬಗ್ಗೆ ಗೌರವವಿದೆ. ಆದರೆ ಅವರು ಆದ್ಯ ವಚನಕಾರ ಜೇಡರ ದಾಸಿಮಯ್ಯನವರಲ್ಲ. ಎಲ್ಲರಿಗೂ ಭಕ್ತಿಪೂರ್ವಕ ಶರಣಾರ್ಥಿ

### ನಾನು ಕಂಡುಕೊಂಡ ಆಕರಗಳು

1 ಡಾ ಎಚ ದೇವೀರಪ್ಪ ದೇವರ ದಾಸಿಮಯ್ಯ ಮತ್ತು ಜೇಡರಾವ್ ದಾಸಿಮಯ್ಯ ಬೇರೆ ಬೇರೆ
2 ಜೇಡರ ದಾಸಿಮಯ್ಯ – ಸಿರಿಗೇರಿ ಶ್ರೀ ಮಠದ ಪ್ರಕಾಶನ 1973
3 ಡಾ ಎಂ ಚಿದಾನಂದ ಮೂರ್ತಿ ಅವರ ವಚನ ಶೋಧ 1 2
4 ಡಾ ಎಂ ಎಂ ಕಲಬುರ್ಗಿ ಅವರ ಮಾರ್ಗ ಕೃತಿಗಳು
5 ಇಲ್ಲದ ಬೆಕ್ಕು ಕತ್ತಲೆಯಲ್ಲಿ ಹುಡುಕುವಂತೆ ಡಾ ವಿದ್ಯಾಶಂಕರ ಮತ್ತು ಡಾ ಎಂ ಚಿದಾನಂದ ಮೂರ್ತಿ ಕೃಪೆ: ಪ್ರಜಾವಾಣಿ ಹಿ ಸಂಗತ, ಮಂಗಳವಾರ, ಮಾರ್ಚ 25, 2014
6 ನನ್ನ ಶರಣರು ದೇವರು ಮತ್ತು ನನ್ನ ಇನ್ನೂ ಅನೇಕ ಕೃತಿಗಳು
7 ವಚನ ಸಂಪುಟ
8 ತಾಡೋಲೆಗಳು




### ವಾಸುದೇವ ಬಡಿಗೇರ್ ಅವರಿಗೆ ನೇರ ಪ್ರಶ್ನೆಗಳು




1) ದೇವರ ದಾಸಿಮಯ್ಯ ವಚನಕಾರನಾಗಿದ್ದು ಬಸವಣ್ಣನವರ ಉಲ್ಲೇಖವನ್ನು ಮಾಡಿಲ್ಲ ಎನ್ನುವ ನೀವು ಇಮ್ಮಡಿ ಜಯಸಿಂಹನ ಉಲ್ಲೇಖವನ್ನು ತನ್ನ ವಚನದಲ್ಲಿ ದಾಖಲಿಸಿದ್ದಾರೆಯೇ ?
2) ದಾಸಿಮಯ್ಯನ ಹೆಂಡತಿ ದುಗ್ಗಳೆ ಬಸವಣ್ಣ ಅಲ್ಲಮ ಚೆನ್ನ ಬಸವಣ್ಣ ಸಿದ್ಧರಾಮರನ್ನು ತನ್ನ ವಚನದಲ್ಲಿ ಉಲ್ಲೇಖ ಮಾಡಿದ್ದಾರೆ. ಹಾಗಿದ್ದಲ್ಲಿ ತನಗಿಂತ 140 ವರ್ಷಗಳ ನಂತರ ಬಂದ ಶರಣರನ್ನು ಹೆಸರಿಸಲು ಹೇಗೆ ಸಾಧ್ಯ?
3) ನೀವು ಕೊಟ್ಟ ಗುಡಿ ದೇವಾಲಯಗಳ ಶಾಸನಗಳನ್ನೇದಾರೂ ದಾಕಹಳೆಯಾಗಿ ಕೊಡ ಬಲ್ಲಿರಾ ?
4) ಬಸವೋತ್ತರ ಕಾಲದ ಅದೃಶ್ಯ ಕವಿ ಶಾಂತದೇಶಿಕರ ಕಾವ್ಯಗಳ ಕಥಾಪ್ರಸಂಗ ಪುರಾಣ ಪವಾಡಗಳು ನಿಮ್ಮ ಅರ್ಥದಲ್ಲಿ ಆಕರಗಳೇ ಹೇಗೆ ?
5) ಈ ಹಿಂದೆ ಬಸವಣ್ಣನವರ ಚರಿತ್ರೆಯ ಪುಸ್ತಕವನ್ನು ಬರೆಯುವ ಹುಮ್ಮಸದಲ್ಲಿ ಬಸವಣ್ಣನವರು ವಿಶ್ವ ಕರ್ಮದವರೆಂದು ಬಿಂಬಿಸಲು ಹೋಗಿ ನೀವು ಚರ್ಚೆಗೆ ಗುರಿಯಾಗಿದ್ದ ಹಾಗೆ ಮತ್ತೆ ಈಗ ಇಂತಹ ಪೊಳ್ಳು ಆಕರಗಳನ್ನು ಇಟ್ಟುಕೊಂಡು ಮತ್ತೆ ಅಪಹಾಸ್ಯಕ್ಕೆ ಗುರಿಯಾಗಬೇಡಿ
6) ಹಸ್ತ ಪ್ರತಿಗಳಲ್ಲಿ ಜೇಡರ ದಾಸಿಮಯ್ಯ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?
7) ಕೆಂಭಾವಿ ಭೋಗಣ್ಣ ಶಂಕರದಾಸಿಮಯ್ಯ ಕುಂಬಾರ ಗುಂಡಯ್ಯ ಮಾದಾರ ಚೆನ್ನಯ್ಯ ಕಕ್ಕಯ್ಯ ಮುಂತಾದ ಅನೇಕರು ನಿಮ್ಮ ಪ್ರಕಾರ ಬಸವ ಪೂರ್ವದವರೇ?
8) ಬಸವಣ್ಣನವರ ವಚನಗಳಲ್ಲಿ ದಾಸ ದುಗ್ಗಳೆಯರ ಉಲ್ಲೇಖವು ನಿಮ್ಮ ಗಮನಕ್ಕೆ ಬಂದಿಲ್ಲವೇ?
9) ವಚನ ದರ್ಶನದ ಮುಂದುವರೆದ ಭಾಗ ನಿಮ್ಮ ಈ ಹೊಸ ಶೋಧವೇ?

ಲೇಖನ
ಡಾ ಶಶಿಕಾಂತ ಪಟ್ಟಣ
ರಾಮದುರ್ಗ – ಪುಣೆ
ಮೊ: 9552002338



# ವೀರಶೈವ ಲಿಂಗಾಯತ ಒಂದೇ: ಡಾ. ಚನ್ನಸಿದ್ಧರಾಮ ಶಿವಾಚಾರ್ಯರು

ಚಿಂಚೋಳಿ:ವೀರಶೈವ ಲಿಂಗಾಯತ ಒಂದೆ, ಸಮಾಜವನ್ನು ಇಬ್ಭಾಗ ಮಾಡುವ ಹಾಗೂ ರಾಜ–ಕೀಯ ಬೆಳೆಯನ್ನು ಬೆಯಿಸಲು ಲಿಂಗಾಯತ ಧರ್ಮದಲ್ಲಿ ಗೊಂದಲ ಸೃಷ್ಟಿ ಮಾಡಲು ಕೆಲವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರು ಶ್ರೀಶೈಲ ಮಹಾಪಿಠ ಆಶೀರ್ವಾಚನ ನೀಡುತ್ತಾ ಭಕ್ತಾದಿಗಳಿಗೆ ಉಪದೇಶಿಸಿದ್ದರು.

ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ, ಪಂಚಾಚಾರ್ಯರ ಯುಗಮಾನೋತ್ಸವ ಹಾಗೂ ಮಹಾತ್ಮ ಬಸವೇಶ್ವರ ಜಯಂತಿ ಅಣವಾರ ಕ್ರಾಸ್‌ನ ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ವೈಭವಯುತ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು ಗಣ್ಯ ವ್ಯಕ್ತಿಗಳು ಜ್ಯೋತಿ ಬೆಳಗಿಸುದ ನಂತರ ಆಶೀರ್ವಚನ ನೀಡುತಾ ವೀರಶೈವ ಲಿಂಗಾಯತ ಸಮಾಜದಲ್ಲಿ ಗೊಂದಲ ಸೃಷ್ಟಿ ಮಾಡಲು ಪ್ರಯತ್ನ ಗಳು ನಡೆಯುತ್ತಿದ್ದು, ಅದಕ್ಕೆ ಸಾಥ ಕೊಡೆದೆ ಗೊಂದಲವನ್ನು ಬದೆಗಟ್ಟಬೇಕು, ಯಾವುದೇ ಒಂದು ವಚನ ಕೇಳಿ ಅದರ ಅರ್ಥ ಅಪಾರ್ಥ ಮಾಡಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಪಂಚಾಚಾರ್ಯರು, ಬಸವಾದಿ ಶಿವಶರಣರು ವಚನಗಳ ಪವಾಡಗಳ



ಮೂಲಕ ಸಿದ್ಧಾಂತಗಳನ್ನು ಪ್ರತಿಪಾದಿಸಿದರು, ಶ್ರದ್ಧೆ ಭಕ್ತಿ ಇದಲ್ಲಿ ಪವಾಡಗಳು ನಡೆಯುತ್ತವೆ, ಸಮಾಜದ ಉಭಯ ಪರಂಪರೆಗಳನ್ನು ಗೌರವಿಸಿ ವೀರಶೈವ ಲಿಂಗಾಯತ ಸಮುದಾಯವನ್ನು ಅಭಿವೃದ್ಧಿ ಪಡಿಸಿ ಶರಣರ ವಿಚಾರಧಾರೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಯಶಸ್ಸು ಕಾಣಬೇಕು, ಮುಂದಿನ ದಿನ ಮಾನಗಳಲ್ಲಿ ಉಭಯ ಜಯಂತಿಗಳನ್ನು ಒಂದೇ ಸಮಯದಲ್ಲಿ ಆಚರಣೆ ಮಾಡಿ ಸಮಾನತೆಯ ಸಂದೇಶ ಸಾರಬೇಕು, ವೀರಶೈವ ಲಿಂಗಾಯತ ಧರ್ಮ ಹಿಂದೆ ಇತ್ತು ಇವತ್ತಿಗೂ ಇದೆ ಮುಂದಿನ ದಿನಮಾನಗಳಲ್ಲಿ ಇರುತ್ತದೆ ಎಂದ ಆಶೀರ್ವಚನ ನೀಡಿದರು.

ಸೇಡಂ ಮಾಜಿ ಶಾಸಕರಾದ ರಾಜಕುಮಾರ ಪಾಟೀಲ್ ತೇಲ್ಕೂರ ಮಾತನಾಡಿ, ಶ್ರೀಶೈಲಕ್ಕೆ ಬರುವ ಭಕ್ತಾದಿಗಳಗೊಸ್ಕರ ನೆರಳಿಗಾಗಿ ಲಕ್ಷಾಂತರ ಗಿಡಗಳನ್ನು ನೆಟ್ಟಿದ ಕೀರ್ತಿ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರಿಗೆ ಸೇರುತ್ತದೆ, ಗುರು ವಿರಕ್ತ ಸಮಾಜದ ಎರಡು ಕಣ್ಣುಗಳು, ದೋರಪಯೋಗದಲಿ ಸಮಾಜದ ಅಂಕಡೊಂಕ ಮೂಢನಂಬಿಕೆಗಳನ್ನು ಹೋಗಲಾಡಿಸಿ ಸಾಮಾಜಿಕ ಸಮಾನತೆಕ್ಕಾಗಿ ಶ್ರೀ ರೇಣುಕಾಚಾರ್ಯರ ಕ್ರಾಂತಿ ಮಾಡಿದರು. ಲಿಂಗಾಯತ ಸಮಾಜದ ಬೀಜ ಹಾಕಿದ್ದರು ರೇಣುಕಾಚಾರ್ಯರು, ಅದಕ್ಕೆ ಮರವಾಗಿ ಬೆಳೆಸಿದ್ದು, 12 ಶತಮಾನದಲ್ಲಿ ಬಸವಣ್ಣ ನವರ. ಅಣವಾರ ಗ್ರಾಮದ ರೇವಣಸಿದ್ದೇಶ್ವರ ದೇವಸ್ಥಾನವನ್ನು ಮುಂದಿನ ದಿನಗಳಲ್ಲಿ ಒಂದು ತೀರ್ಥ ಸ್ಥಾನ ಆಗಬೇಕು ಎಂದು ಹೇಳಿದ್ದರು

ಮಾಜಿ ಕಲಬುರಗಿ ಕ್ಷೇತ್ರದ ಸಂಸದರಾದ ಡಾ. ಉಮೇಶ ಜಾಧವ ಮಾತನಾಡಿ, ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಶ್ರೀ ರೇಣುಕಾಚಾರ್ಯರ ಜಯಂತಿಗೆ ರಾಜ್ಯ ಮಾಜಿ ಮುಖ್ಯಮಂತ್ರಿಗಳಾದ ಬೋಮ್ಮಯಿ ಅವರಿಂದ ಅನುಮತಿ ಪಡೆದಿದ್ದು ನಾನೆ, ಸನತಾನ ಧರ್ಮಕ್ಕೆ ಕೆಟ್ಟ ಹೆಸರು ತರಲು ಕೆಲವು ಪ್ರಯತ್ನ ಗಳು ನಡೆಯುತ್ತಿವೆ, ಸೂರ್ಯ ಚಂದ್ರ ಇರುವವರೆಗೂ ಸನಾತನ ಧರ್ಮ ಉಳಿಯುತ್ತದೆ ಎಂದು ಹೇಳಿದರು. ನಂತರ ಕರುಣೇಶ್ವರ ಶಿವಾಚಾರ್ಯರು ಕಂಚಾಳಕುಂಟಿ ಮಠ ನಿಡಗುಂದಾ, ಮಾತನಾಡಿ ಶ್ರೀ ರೇಣುಕಾಚಾರ್ಯ ಜಯಂತಿ ಸತತವಾಗಿ 5 ವರ್ಷಗಳಿಂದ ಆಚ–ರಿಸುತ್ತ ಬಂದಿದ್ದು, 3 ವರ್ಷ ಚಿಂಚೋಳಿಯಲ್ಲಿ, 2 ವರ್ಷಗಳಿಂದ ರೇವಣಸಿದ್ದೇಶ್ವರ ಸುಕ್ಷೇತ್ರದಲ್ಲಿ , ಬಹಳಷ್ಟು ಪುರಾತನವಾದ ಈ ಕ್ಷೇತ್ರವನ್ನು ಅಭಿವೃದ್ಧಿ ಆಗಬೇಕು, ರೇವಣಸಿದ್ದೇಶ್ವರ ದೇಶದಲ್ಲಿ ಸಂಚರಿಸಿ, ದೇಶದಲ್ಲಿ ಧರ್ಮದ ದಂಢಯಾತ್ರೆಗಳನ್ನು ಮಾಡಿ ದೇಶದ ಅಜ್ಞಾನದ ಅಂಧಕಾರ ದೂರ ಮಾಡಿದ ಮಹಾತ್ಮರ, ಎಲ್ಲಕಡೆಗಳಲ್ಲಿ ದೇವಸ್ಥಾನಗಳನ್ನು ಕಾಣುತ್ತಿವೆ, ರಟಕಲ್, ಹಲಕೋಡ, ರೇಣುಕಾ ಆಚಾರ್ಯ ಪಾದ ಸನ್ನಿಧಿ ಧರ್ಮ ಕೇಂದ್ರ ಗಳನ್ನು ಆಗಿವೆ, ಚಿಂಚೋಳಿಯಲ್ಲಿ ರುವ ರೇವಣಸಿದ್ದೇಶ್ವರ ಸುಕ್ಷೇತ್ರವನ್ನು ಎಲ್ಲರೂ ಕೈಜೊಡಿಸ ಅಭೀವೃದ್ಧಿ ಪಡಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀ ಕೆಂಚವೃಷಭೇಂದ್ರ ಶಿವಾಚಾರ್ಯರು ಸಂಸ್ಥಾನ ಹಿರೇಮಠ ಆಲೂರು, ಶ್ರೀ ತಪೊರತ್ನ ದ್ವೀತಿಯ ಸಾಂಬ ಶಿವಾಚಾರ್ಯರು ಬ್ರಹನ್ಮಠ ಸಾಂಬಸಲಗರ ಕೇಸರಿಬೆಟ್ಟ, ಶ್ರೀ ಅಭಿನವ ರಾಚೋಟೇಶ್ವರ ಶಿವಾಚಾರ್ಯರು ಭೃಂಗಿ ಪಾಚೇಶ್ವರ ಸಂಸ್ಥಾನ ಕಟ್ಟಿಮಠ ಚಂದನಕೇರಾ, ಹಾಗೂ ವಿವಿಧ ಮಠಾಧೀಶರು ಹಾಗೂ ಅನೀಲಕುಮಾರ ಜಮದಾರ, ಸಮಿತಿಯ ಅಧ್ಯಕ್ಷರಾದ ಸಂಗಯ್ಯ ಸ್ವಾಮಿ, ಗೌರವ ಅಧ್ಯಕ್ಷರಾದ ವೀರಣ್ಣ ಗಂಗಾಣಿ, ಬಾಬುರಾವ ಪಾಟೀಲ್, ದೀಪಕನಾಗ ಪೂಣ್ಯಶೆಟ್ಟಿ, ಶರಣು ಮೊತ್ಕಪಳ್ಳಿ, ಸಂಜೀವಕುಮಾರ ಪಾಟೀಲ, ಶೈಲೇಶ್ ಹುಲಿ, ಉಮಾ ಪಾಟೀಲ್, ಮಲ್ಲಿಕಾರ್ಜುನ ಜಂಗಮಠ, ಮಲ್ಲಿಕಾರ್ಜುನ ಸ್ವಾಮಿ, ಉಪಸ್ಥಿತರಿದ್ದರು

## ಜುಲೈ ತಿಂಗಳಿನಿಂದ ನರೇಗಾ ಬದಲಾಗಿ ವ್ಹಿಬಿ-ಜಿ ರಾಮ್ ಜಿ ಯೋಜನೆ ಅನುಷ್ಠಾನ

# ವ್ಹಿಬಿ–ಜಿ ರಾಮ್ ಜಿ: ಗ್ರಾಮೀಣ ಜನರ ಉದ್ಯೋಗಕ್ಕೆ ಪೂರಕ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಬಸವರಾಜ ನಂದಿಹಾಳ

ಬಸವನಬಾಗೇವಾಡಿ: ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಕಾಯ್ದೆ 2025 ವೇತನ ಉದ್ಯೋಗವನ್ನು ಸುಸ್ಥಿರ ಅಭಿವೃದ್ಧಿ ವಿಕಸಿತ ಭಾರತ್ @2047 ರ ದೃಷ್ಟಿಕೋನದೊಂದಿಗೆ ಜೋಡಿಸುವ ಮೂಲಕ ಗ್ರಾಮೀಣ ಉದ್ಯೋಗ ಚೌಕಟ್ಟನ್ನು ಪರಿವರ್ತಿಸಲು ಪ್ರಯತ್ನಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಈ ಕಾಯ್ದೆಯು ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಪ್ರತಿ ಹಣಕಾಸು ವರ್ಷದಲ್ಲಿ ಶಾಸನಬದ್ಧ ಉದ್ಯೋಗ ಖಾತರಿಯನ್ನು 100 ರಿಂದ 125 ದಿನಗಳಿಗೆ ಹೆಚ್ಚಿಸುತ್ತದೆ. ಫಲಿತಾಂಶ–ಆಧಾರಿತ ಕೆಲಸಗಳು ಮತ್ತು ಡಿಜಿಟಲ್ ಸಂಯೋಜಿತ ಯೋಜನೆಯ ಮೂಲಕ ನೀರಿನ ಸುರಕ್ಷತೆ, ಗ್ರಾಮೀಣ ಮೂಲಸೌಕರ್ಯ, ಜೀವನೋಪಾಯ ಸ್ವತ್ತುಗಳು ಮತ್ತು ವಿಪತ್ತು ಸಿದ್ಧತೆಗೆ ಚೌಕಟ್ಟು ಆದ್ಯತೆ ನೀಡುತ್ತದೆ. ಬಯೋಮೆಟ್ರಿಕ್ ದೃಢೀಕರಣ, ಜಿಯೋ–ರೆಫರೆನ್ಸಿಂಗ್, ಡಿಜಿಟಲ್ ಮೇಲ್ವಿಚಾರಣೆ ಮತ್ತು ಸಮಯಕ್ಕೆ ಅನುಗುಣವಾಗಿ ವೇತನ ಪಾವತಿಗಳ ಮೂಲಕ ತಂತ್ರಜ್ಞಾನ–ಸಕ್ರಿಯಗೊಳಿಸಿದ ಆಡಳಿತವು ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಕಡ್ಡಾಯ ಸಾಮಾಜಿಕ ಲೆಕ್ಕಪರಿಶೋಧನೆಗಳು, ರಚನಾತ್ಮಕ ಮೇಲ್ವಿಚಾರಣಾ ಕಾರ್ಯವಿಧಾನಗಳು ಮತ್ತು ಕುಂದುಕೊರತೆ ಪರಿಹಾರ ವ್ಯವಸ್ಥೆಗಳು ಅನುಷ್ಠಾನವನ್ನು ಮತ್ತಷ್ಟು ಬಲಪಡಿಸುತ್ತವೆ. ಈ ಕಾಯ್ದೆಯು ಗ್ರಾಮೀಣ ಉದ್ಯೋಗವನ್ನು ಸುಸ್ಥಿರ ಗ್ರಾಮ ಅಭಿವೃದ್ಧಿ ಮತ್ತು ಬಾಳಿಕೆ ಬರುವ ಆಸ್ತಿ ಸೃಷ್ಟಿಯ ಉತ್ಪಾದಕ ಚಾಲಕನಾಗಿ ಇರಿಸುತ್ತದೆ.

ವ್ಹಿಬಿ–ಜಿ ರಾಮ್ ಜೀ ಜುಲೈ ತಿಂಗಳಲ್ಲಿ ಕಾಯ್ದೆ ಜಾರಿಗೆ ಬರುವುದರೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಒಉಓಖಇಉಂ) 2005 ರದ್ದುಗೊಳ್ಳಲಿದೆ.

ಹೊಸ ಕಾಯ್ದೆಯು ಪ್ರತಿ ಹಣಕಾಸು ವರ್ಷದಲ್ಲಿ 125 ದಿನಗಳ ಕೂಲಿ ಉದ್ಯೋಗದ ಶಾಸನಬದ್ಧ ಖಾತರಿಯನ್ನು ಸ್ಥಾಪಿಸುತ್ತದೆ. ಅಲ್ಲಿ ವಯಸ್ಕ ಸದಸ್ಯರು ಕೌಶಲ್ಯರಹಿತ ದೈಹಿಕ ಕೆಲಸವನ್ನು ಕೈಗೊಳ್ಳಲು ಸ್ವಯಂಸೇವಕರಾಗುತ್ತಾರೆ. ಈ ವರ್ಧಿತ ಖಾತರಿಯು ಗ್ರಾಮೀಣ ಮನೆಯ ಆದಾಯ, ಜೀವನೋಪಾಯ ಭದ್ರತೆ, ಗ್ರಾಮ ಮಟ್ಟದ ಮೂಲಸೌಕರ್ಯ ಸೃಷ್ಟಿ ಮತ್ತು ಸುಸ್ಥಿರ ಗ್ರಾಮೀಣ ಅಭಿವೃದ್ಧಿಗೆ ಹೊಸ ಆವೇಗವನ್ನು ನೀಡುತ್ತದೆ ಎಂದು ನಿರೀಕ್ಷಿಸಲಾಗಿದೆ. ಅದೇ ಸಮಯದಲ್ಲಿ, ನೀರಿನ ಸುರಕ್ಷತೆ, ಗ್ರಾಮೀಣ ಮೂಲಸೌಕರ್ಯ, ಗ್ರಾಮೀಣ ಜೀವನೋಪಾಯ, ಸ್ಥಳೀಯ ಆರ್ಥಿಕ ಬೆಳವಣಿಗೆ ಮತ್ತು ಹವಾಮಾನ ಸಂಬಂಧಿತ ಸವಾಲುಗಳ ವಿರುದ್ಧ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವ ಬಾಳಿಕೆ ಬರುವ ಮತ್ತು ಉತ್ಪಾದಕ ಗ್ರಾಮೀಣ ಮೂಲಸೌಕರ್ಯವನ್ನು ರಚಿಸಲು ಇದು ಪ್ರಯತ್ನಿಸುತ್ತದೆ.

ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಪ್ರತಿ ಹಣಕಾಸು ವರ್ಷದಲ್ಲಿ 100 ದಿನಗಳಿಂದ 125 ದಿನಗಳಿಗೆ ಶಾಸನಬದ್ಧ ಉದ್ಯೋಗ ಖಾತರಿಯನ್ನು ಹೆಚ್ಚಿಸುವುದು. ಜೀವನೋಪಾಯ ಭದ್ರತೆಯನ್ನು ಬಲಪಡಿಸುವುದು, ಆದಾಯ ಸ್ಥಿರತೆಯನ್ನು ಸುಧಾರಿಸುವುದು, ಗ್ರಾಮೀಣ ಬಳಕೆಯನ್ನು ಬೆಂಬಲಿಸುವುದು ಮತ್ತು ದುರ್ಬಲ ಕುಟುಂಬಗಳಿಗೆ ಹೆಚ್ಚಿನ ಆರ್ಥಿಕ ಸ್ಥಿತಿಸ್ಥಾಪಕತ್ವವನ್ನು ಒದಗಿಸುವ ಉದ್ದೇಶವನ್ನು ವರ್ಧಿತ ಖಾತರಿ ಹೊಂದಿದೆ. ಹೊಸ ಯೋಜನೆಯಡಿ ಒಟ್ಟು 318 ವಿವಿಧ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.



> "ಮಹಾತ್ಮಗಾಂಧೀಜಿ ಗ್ರಾಮೀಣ ಉದ್ಯೋಗ ಯೋಜನೆಯನ್ನು ಕೇಂದ್ರ ಸರ್ಕಾರವು ವಿಕಸಿತ ಭಾರತ ಜಿ ರಾಮ್ ಜಿ ಎಂಬುವದಾಗಿ ಬದಲಾವಣೆ ಮಾಡಿದೆ. ಇದು ಜುಲೈ ತಿಂಗಳಲ್ಲಿ ಜಾರಿಗೆ ಬರಲಿದೆ. ಇದೀಗ ಹಳೆಯ ಹೆಸರಿನಲ್ಲಿಯೇ ಯೋಜನೆಯಡಿ ಕಾಮಗಾರಿ ನಡೆಸಲಾಗುತ್ತಿದೆ. ಜನರ ಕೆಲಸದ ಬೇಡಿಕೆಯಂತೆ ಕೆಲಸ ನೀಡಲಾಗುತ್ತಿದೆ. ಬೇಸಿಗೆ ಕಾಲದಲ್ಲಿ ಬೇರೆಡೆ ಗೂಳೆ ಹೋಗದೆ ಈ ಯೋಜನೆಯಡಿ ಜನರು ಉದ್ಯೋಗ ಮಾಡಬೇಕು."
>
> ■ **ವೆಂಕಟೇಶ ವಂದಾಲ**
> ಕಾರ್ಯನಿರ್ವಾಹಕ ಅಧಿಕಾರಿ, ತಾಪಂ, ಬಸವನಬಾಗೇವಾಡಿ.

ತಾಲೂಕಿನ 15 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈಗಾಗಲೇ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಗ್ರಾಮೀಣ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದರ ಮೂಲಕ ಗ್ರಾಮಗಳ ಆಸ್ತಿಗಳನ್ನು ಸೃಜನೆಮಾಡಿದೆ.

ರೈತರಿಗೆ ಅನುಕೂಲವಾಗುವ ಕೃಷಿಹೊಂಡ, ಬದುನಿರ್ಮಾಣ, ಕುರಿ ಶೆಡ್ಡು, ಜಾನುವಾರು ಶೆಡ್ಡು, ಇಂಗು ಬಚ್ಚಲು ಗುಂಡಿ ಸೇರಿದಂತೆ ಅನೇಕ ಕಾಮಗಾರಿಗಳನ್ನು ಗ್ರಾಮ ಪಂಚಾಯತಿ ಹಂತದಲ್ಲಿ ನೀಡಲಾಗಿದೆ. ಇದರ ಜೊತೆಗೆ ತೋಟಗಾರಿಕೆ ಇಲಾಖೆಯಿಂದ ಬಾಳೆ, ನಿಂಬೆ, ಪಪ್ಪಾಯ, ವೀಳ್ಯದೆಲೆ, ದ್ರಾಕ್ಷಿ, ಪೇರು ಅನೇಕ ರೀತಿಯ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಹಾಯಧನ ಒದಗಿಸುತ್ತಿದೆ. ರೇಷ್ಮೆ ಇಲಾಖೆ ವತಿಯಿಂದ ಹಿಪ್ಪೆ ನೇರಳೆ ನಾಟಿ ಮಾಡಲು ಸಹಾಯಧನವನ್ನು ಒದಗಿಸುತ್ತದೆ. ಕೃಷಿ ಇಲಾಖೆಯಿಂದ ಬದು ನಿರ್ಮಾಣ ಹಾಗೂ ಕೃಷಿ ಹೊಂಡಗಳನ್ನು ನರೇಗಾ ಯೋಜನೆಯಲ್ಲಿ ವೈಯಕ್ತಿಕವಾಗಿ ವಿವಿಧ ಇಲಾಖೆಯಿಂದ ಸಹಾಯಧನವನ್ನು ಒದಗಿಸಿ ರೈತರ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ನರೇಗಾ ಯೋಜನೆಯಡಿ ಸಮುದಾಯ ಕಾಮಗಾರಿಗಳಾದ ಶಾಲಾ ಅಭಿವೃದ್ಧಿ ಕಾಮಗಾರಿಗಳು, ತೆರೆದ ಬಾವಿ, ಬಾಂದರ ಹೂಳೆತ್ತುವುದು, ಮಲ್ಟಿ ಅರ್ಕ ಚೆಕ್ ಡ್ಯಾಮ್, ಗೋಡಾವನ, ಕಸ ವಿಲೇವಾರಿ ಘಟಕ, ಗ್ರಾಮ ಪಂಚಾಯತ ಕಟ್ಟಡ, ಎನ್.ಆರ್.ಎಲ್.ಎಂ ಶೆಡ್ಡು, ಅಂಗನವಾಡಿ ಕೇಂದ್ರಗಳು, ಬೂದು ನಿರ್ವಹಣಾ ಘಟಕಗಳು, ನೆಡುತೋಪು ಕಾಮಗಾರಿಗಳು, ನಮ್ಮ ಹೊಲ ನಮ್ಮ ದಾರಿ ಯೋಜನೆ ಅಡಿಯಲ್ಲಿ ರಸ್ತೆಗಳ ಸುಧಾರಣೆ, ಚರಂಡಿಗಳ ನಿರ್ಮಾಣ ಹಾಗೂ ಇನ್ನಿತರ ಸಮುದಾಯ ಕಾಮಗಾರಿಗಳನ್ನು ನರೇಗಾ ಯೋಜನೆ ಅಡಿಯಲ್ಲಿ ಸಹಾಯಧನವನ್ನು ಒದಗಿಸುವುದರ ಮೂಲಕ ಸಮುದಾಯ ಸಂಪನ್ಮೂಲಗಳನ್ನು ಬಳಸಿಕೊಂಡು ಸಮುದಾಯ ಆಸ್ತಿಗಳನ್ನು ಸೃಜನೆ ಮಾಡಲಾಗಿದೆ.

ತಾಲೂಕಿನಲ್ಲಿ 2025– 26 ನೇ ಸಾಲಿನಲ್ಲಿ 1 ಲಕ್ಷ 59 ಸಾವಿರ ಮಾನವ ದಿನಗಳನ್ನು ಸೃಜಸಲು ಗುರಿ ಹೊಂದಲಾಗಿತ್ತು. ಇದರಲ್ಲಿ 92,580 ಮಾನವ ದಿನಗಳನ್ನು ಸೃಜನೆಮಾಡಿ ಶೇ 58.16 ಸಾಧನೆಯನ್ನು ಮಾಡಲಾಗಿದೆ. ಮಾನವ ದಿನಗಳ ಸೃಜನೆಯಲ್ಲಿ ದಿಂಡವಾರ ಗ್ರಾಮ ಪಂಚಾಯಿತಿ ಶೇ.107.49, ನರಸಲಗಿ ಗ್ರಾಮ ಪಂಚಾಯಿತಿ ಶೇ. 107.34 ಅತಿಹೆಚ್ಚು ಮಾನವ ಸೃಜನೆ ಮಾಡುವ ಮೂಲಕ ತಾಲೂಕಿನಲ್ಲಿ ಸಾಧನೆ ಮಾಡಿವೆ. ತಾಲೂಕಿನಲ್ಲಿ ಒಟ್ಟು ಮಾನವ ದಿನಗಳ ಸೃಜನೆಯಲ್ಲಿ ಶೇ 56.36 ರಷ್ಟು ಮಹಿಳಾ ಕೂಲಿಕಾರರಿಗೆ ನರೇಗಾ ಯೋಜನೆಯಡಿಯಲ್ಲಿ ಕೆಲಸವನ್ನು ಒದಗಿಸಲಾಗಿದೆ

2026–27 ನೇ ಸಾಲಿನಲ್ಲಿ ಪ್ರಸ್ತುತ ತಿಂಗಳ 40,752 ಮಾನವ ದಿನಗಳ ಗುರಿಯನ್ನು ನೀಡಲಾಗಿತ್ತು. ಪ್ರಸ್ತುತ 4154 ಮಾನವ ದಿನಗಳನ್ನು ಸೃಜಿಸಲಾಗಿದೆ. ತಾಲೂಕಿನ ಒಟ್ಟು 15 ಗ್ರಾಮ ಪಂಚಾಯ್ತಿಯಲ್ಲಿ 32,924 ಕೂಲಿಕಾರರು ಜಾಬ ಕಾರ್ಡ್ ಅನ್ನು ಹೊಂದಿದ್ದಾರೆ. ಅದರಲ್ಲಿ 23,051 ಜನ ಜಾಬ ಕಾರ್ಡ್ ನೊಂದಿಗೆ ಆಧಾರ ಜೋಡಣೆ ಮಾಡಿಕೊಂಡು ಇದರಲ್ಲಿ 18,552 ಜನ ಜಾಬ ಕಾರ್ಡ್ ಗೆ ಇಕೆವೈಸಿ ಮಾಡಿಕೊಂಡಿದ್ದಾರೆ. ಶೇ. 80.26ರಷ್ಟು ಪ್ರಗತಿ ಸಾಧಿಸಿದೆ. ಉಳಿದ 4,499 ಜನರ ಇಕೆವೈಸಿಯನ್ನು ಮಾಡಲು ನಿರಂತರವಾಗಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕಾರ್ಯ ಮಾಡಲಾಗುತ್ತಿದೆ. ಪ್ರಸ್ತುತ ತಾಲೂಕಿನ ವ್ಯಾಪ್ತಿಯಲ್ಲಿ ಇಂದು ಮಂಗಳವಾರ 1387 ಕೂಲಿಕಾರರು ನರೇಗಾ ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎಂದು ತಾಲೂಕು ಪಂಚಾಯಿತಿಯ ಮೂಲ ತಿಳಿಸಿದೆ.

# ಪ್ರತಿವರ್ಷ 25 ಮಕ್ಕಳಿಗೆ ಉಚಿತ ಶಿಕ್ಷಣ

ಭಾಲ್ಕಿ: ಹಿರೇಮಠ ಸಂಸ್ಥಾನದಲ್ಲಿ ಪ್ರಸ್ತುತ ವರ್ಷದಿಂದ ಬಾಲಕರ ವಸತಿ ಶಾಲೆ ಪ್ರಾರಂಭಿಸಿ 25 ಬಡ ಮಕ್ಕಳಿಗೆ ಉಚಿತ ಶಿಕ್ಷಣ, ಅನ್ನ, ಆಶ್ರಯ ನೀಡಲು ನಿರ್ಧರಿಸಲಾಗಿದೆ ಎಂದು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ನಗರದ ಹಿರೇಮಠ ಸಂಸ್ಥಾನದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ವತಿಯಿಂದ 2026–27ನೇ ಸಾಲಿನ ಭಾಲಿ ಮಠದ ಬಾಲಕರ ವಸತಿ ಶಾಲೆಯ ಕರಪತ್ರ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಶ್ರೀಮಠದಲ್ಲಿ ಬಡ, ಅನಾಥ ಮಕ್ಕಳಿಗೆ, ಶಿಕ್ಷಣ ಮತ್ತು ಸಂಸ್ಕಾರ ದೊರೆಯಬೇಕೆಂದು ಶ್ರೀಮಠದಲ್ಲಿ ಉಚಿತ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ.ಈ ವರ್ಷ 1ನೇ ತರಗತಿಗೆ 25 ಮಕ್ಕಳಿಗೆ ಪ್ರವೇಶ ನೀಡಲಾಗುತ್ತದೆ. 1ನೇ ತರಗತಿಗೆ ಪ್ರವೇಶ ಪಡೆದ ಮಕ್ಕಳಿಗೆ 10ನೇ ತರಗತಿವರೆಗೆ ಶಿಕ್ಷಣ, ಊಟ ಮತ್ತು ವಸತಿ ಉಚಿತವಾಗಿ ನೀಡಲಾಗುತ್ತದೆ. ತಂದೆ–ತಾಯಿ ಇಲ್ಲದ ಬಡಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುವುದು.

ಇಂತಹ ಮಕ್ಕಳ ಪ್ರವೇಶಕ್ಕಾಗಿ ಮೇ 31ಕ್ಕೆ ಆಯ್ಕೆ ಪ್ರಕ್ರಿಯೆ ನಡೆಯಲ್ಲಿದ್ದು, ಅರ್ಹರು ಅಂದು ಶ್ರೀಮಠದಲ್ಲಿ ಹಾಜರಿರಬೇಕು ಎಂದರು. ಕರಪತ್ರ ಬಿಡುಗಡೆಗೊಳಿಸಿದ ಜಗನ್ನಾಥ ಹಲಂಗೆ ಮಾತನಾಡಿ, ಭಾಲ್ಕಿ ಶ್ರೀಮಠ ಮಾಡುತ್ತಿರುವ ಶೈಕ್ಷಣಿಕ ಸೇವೆ ಅಪೂರ್ವವಾಗಿದೆ. ಶ್ರೀಮಠದಲ್ಲಿ ಬಡಮಕ್ಕಳಿಗೆ ಪೂಜ್ಯರು ಸುವರ್ಣಾ ಅವಕಾಶ ನೀಡಿದ್ದಾರೆ. ಬಡತನದಿಂದ ಶಿಕ್ಷಣದಿಂದ ಯಾರೂ ವಂಚಿತರಾಗಬಾರದೆಂಬ ಉದ್ದೇಶ ಪೂಜ್ಯರು ಹೊಂದಿದ್ದಾರೆ.ಪೂಜ್ಯರ ಈ ಸಮಾಜಿಕ ಕಳಕಳಿ ಅಭಿನಂದನೀಯವಾಗಿದೆ ಎಂದು ನುಡಿದರು.



# ನಿಮ್ಮ ಜೀವನದ ಹಡಗಿಗೆ ನೀವೇ ನಾವಿಕರಾಗಿ

■ ಉದಯರಶ್ಮಿ ದಿನಪತ್ರಿಕೆ

**ಜಯ್ ನುಡಿ**
**(ವ್ಯಕ್ತಿತ್ವ ವಿಕಸನ ಕುರಿತ ಲೇಖನ ಮಾಲಿಕೆ)**

ಒಂದು ಹಳ್ಳಿಯಲ್ಲಿ ಒಬ್ಬ ರೈತನಿದ್ದ. ಅವನಿಗೆ ದೊಡ್ಡ ಭತ್ತದ ಗದ್ದೆಯಿತ್ತು. ಆ ಗದ್ದೆಯಲ್ಲಿ ಒಂದು ಗುಬ್ಬಚ್ಚಿ ತನ್ನ ಮರಿಗಳೊಂದಿಗೆ ಗೂಡು ಕಟ್ಟಿ ವಾಸಿಸುತ್ತಿತ್ತು. ಕೆಲವು ದಿನಗಳ ನಂತರ ಗದ್ದೆಯಲ್ಲಿನ ಭತ್ತದ ಬೆಳೆ ಸಂಪೂರ್ಣವಾಗಿ ಕಟಾವಿಗೆ ಬಂದಿತು. ಒಂದು ದಿನ ರೈತ ಗದ್ದೆಯ ಬಳಿ ಬಂದು 'ಬೆಳೆ ಚೆನ್ನಾಗಿ ಬಂದಿದೆ. ನಾಳೆ ನನ್ನ ನೆರೆಹೊರೆಯವರನ್ನು ಕರೆದು ಬೆಳೆ ಕಟಾವು ಮಾಡಲು ಹೇಳುತ್ತೇನೆ.' ಎಂದ. ಇದನ್ನು ಕೇಳಿದ ಮರಿ ಗುಬ್ಬಚ್ಚಿಗಳು ಹೆದರಿ,' ತಾಯಿ ಗುಬ್ಬಚ್ಚಿ ಬಂದ ತಕ್ಷಣ 'ಅಮ್ಮಾ ನಾಳೆ ರೈತ ತನ್ನ ನೆರೆಹೊರೆಯವರನ್ನು ಕರೆದುಕೊಂಡು ಬಂದು ಬೆಳೆ ಕಟಾವು ಮಾಡಿಸುತ್ತಾನಂತೆ ನಾವು ಬೇರೆ ಕಡೆಹೋಗೋಣ' ಎಂದವು. ಅದಕ್ಕೆ ತಾಯಿ ಗುಬ್ಬಚ್ಚಿ, ಮಕ್ಕಳೆ, ಹೆದರಬೇಡಿ ನಾಳೆ ಕಟಾವು ಆಗುವುದಿಲ್ಲ.' ಎಂದಿತು. ತಾಯಿ ಹೇಳಿದಂತೆಯೇ ಮರುದಿನ ಬೆಳೆ ಕಟಾವು ಆಗಲಿಲ್ಲ. ಕೆಲವು ದಿನಗಳ ನಂತರ ರೈತ ಮತ್ತೆ ಬಂದು, 'ನೆರೆಹೊರೆಯವರು ಬರಲಿಲ್ಲ. ನಾಳೆ ನನ್ನ ಮಕ್ಕಳನ್ನು ಕರೆದುಕೊಂಡು ಬಂದು ಕಟಾವು ಮಾಡಿಸುತ್ತೇನೆ.' ಎಂದನು ಮರಿಗಳು ಮತ್ತೆ ಹೆದರಿ ತಾಯಿ ಗುಬ್ಬಚ್ಚಿಗೆ ಹೇಳಿದಾಗ ನಾಳೆಯೂ ಬೆಳೆ ಕಟಾವು ಆಗುವುದಿಲ್ಲ., ಧೈರ್ಯದಿಂದಿರಿ.' ಎಂದಿತು. ತಾಯಿ ಗುಬ್ಬಚ್ಚಿ ಹೇಳಿದಂತೆ ಮರುದಿನವೂ ಕಟಾವು ಆಗುವುದಿಲ್ಲ.

ಕೊನೆಗೆ ಒಂದು ದಿನ ರೈತ ಗದ್ದೆಗೆ ಬಂದು ಬೇಸರದಿಂದ, 'ಬೇರೆಯವರನ್ನು ನಂಬಿ ಪ್ರಯೋಜನವಿಲ್ಲ. ನನ್ನ ಕೆಲಸವನ್ನು ನಾನೇ ಮಾಡಬೇಕು. ನಾಳೆ ಬೆಳಗ್ಗೆ ನಾನೇ ಬಂದು ಕಟಾವು ಮಾಡಲು ಶುರು ಮಾಡುತ್ತೇನೆ' ಎಂದು ನಿರ್ಧರಿಸುತ್ತಾನೆ.




ಇದನ್ನು ಕೇಳಿದ ತಾಯಿ ಗುಬ್ಬಚ್ಚಿ ಮರಿಗಳೆಗೆ ಹೇಳಿತು, 'ಮಕ್ಕಳೇ, ಈಗ ನಾವು ಗೂಡನ್ನು ಬಿಡಬೇಕಾದ ಸಮಯ ಬಂದಿದೆ.' ಆಗ ಮರಿ ಗುಬ್ಬಚ್ಚಿಗಳು ನಾಳೆ ಬೆಳೆ ಕಟಾವು ಆಗುತ್ತದೆಂದು ಅದ್ದೇಗೆ ಖಚಿತವಾಗಿ ಹೇಳುತ್ತಿಯಮ್ಮ ಎಂದು ಕೇಳಿದವು.ಅದಕ್ಕೆ ತಾಯಿಗುಬ್ಬಚ್ಚಿ ಹೇಳಿತು,' ಏಕೆಂದರೆ ರೈತ ಈಗ ತನ್ನ ಕೆಲಸವನ್ನು ತಾನೇ ಮಾಡಲು ನಿರ್ಧರಿಸಿದ್ದಾನೆ. ಹಾಗಾಗಿ ನಾಳೆ ಖಂಡಿತ ಕಟಾವು ನಡೆಯುತ್ತದೆ. ಎಂದು ಉತ್ತರಿಸಿತು. ಮರುದಿನ ಬೆಳಗ್ಗೆ ರೈತನೇ ಬಂದು ಕಟಾವು ಪ್ರಾರಂಭಿಸಿದ. ಅಷ್ಟರಲ್ಲಿ ಗುಬ್ಬಚ್ಚಿಗಳು



ಸುರಕ್ಷಿತವಾಗಿ ಬೇರೆಡೆಗೆ ಹಾರಿ ಹೋಗಿದ್ದವು.

ಈ ಕಥೆಯ ಸಂದೇಶ: ನಾವು ನಮ್ಮ ಕೆಲಸಕ್ಕಾಗಿ ಯಾವಾಗಲೂ ಬೇರೆಯವರ ಮೇಲೆ ಅವಲಂಬಿತರಾಗಬಾರದು. ನಮ್ಮ ಕೆಲಸವನ್ನು ನಾವೇ ಜವಾಬ್ದಾರಿಯಿಂದ ಮಾಡಿದಾಗ ಮಾತ್ರ ಅದು ಯಶಸ್ವಿಯಾಗುತ್ತದೆ. ಸ್ವಾವಲಂಬನೆಯೇ ಯಶಸ್ಸಿನ ಮೂಲ.

### ರಿಮೋಟ್

ನಮ್ಮ ಬದುಕಿನ ರಿಮೋಟ್ ನಮ್ಮ ಹತ್ತಿರವಿದ್ದರೆ ನಾವಂದುಕೊಂಡಿದ್ದನ್ನು ನಾವು ಸಾಧಿಸಬಹುದು. ಅಂದರೆ,ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳುವುದು ನಮ್ಮ ಬುದ್ಧಿ ಮತ್ತು ಶಕ್ತಿಯ ಮೇಲೆ ನಾವು ನಂಬಿಕೆಯನ್ನು ಇಡುವುದು. ಆರ್ಥಿಕವಾಗಿ ಮತ್ತು ಮಾನಸಿಕವಾಗಿ ನಾವು ನಮ್ಮ ಜವಾಬ್ದಾರಿಗಳಿಗೆ ಕರ್ತವ್ಯಗಳಿಗೆ ಅಗತ್ಯಗಳಿಗೆ ಇತರರ ಮೇಲೆ ಅವಲಂಬಿತರಾದರೆ ಬದುಕು ದುಃಖದ ಸಾಗರದಲ್ಲಿ ಮುಳುಗಿಹೋಗುತ್ತದೆ. ಆದ್ದರಿಂದ ನಿರ್ಧಾರಗಳನ್ನು ತೆಗೆದುಕೊಳ್ಳಲು ಬೇರೆಯವರ ಮೇಲೆ ಅವಲಂಬಿತರಾಗುವುದು ಸೋಲಿನ ಸುಳಿಯಲ್ಲಿ ಬೀಳುವಂತೆ ಮಾಡುತ್ತದೆ. ಜೀವನದಲ್ಲಿ ಯಶಸ್ಸು ಸಾಧಿಸಲು ಪ್ರತಿಯೊಬ್ಬರಿಗೂ ಸ್ವಾವಲಂಬನೆ ಅತ್ಯಗತ್ಯ. 'ನಮ್ಮ ಕೈಯೇ ನಮಗೆ ಕನ್ನಡಿ.' ಎಂಬ ಗಾದೆ ಮಾತು ಸ್ವಾವಲಂಬನೆಯ ಮಹತ್ವವನ್ನು ಸಾರಿ ಹೇಳುತ್ತದೆ. 'ಆರ್ಥಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಸ್ವತಂತ್ರ ನಿರ್ಧಾರಗಲನ್ನು ತೆಗೆದುಕೊಳ್ಳುವ ಸಾಮರ್ಥ್ಯವೇ ಸ್ವಾವಲಂಬನೆ.'

ಹಾಗಾದರೆ ಸ್ವಾವಲಂಬನೆ ಸಾಧಿಸಲು ಇರುವ ತಂತ್ರಗಳಾವವು ಎಂಬ ಪ್ರಶ್ನೆಗೆ ಇಲ್ಲಿವೆ ಕೆಲವು ಸಲಹೆಗಳು

### ಸ್ವತಂತ್ರ ನಿರ್ಧಾರ

ಹಲವರ ಮಾತುಗಳನ್ನು ಕೇಳು, ಕೊನೆಗೆ ನಿನ್ನ ಸ್ವಂತ ನಿರ್ಧಾರ ತೆಗೆದುಕೊ. ಬೇರೆಯವರು ಬಂದು ಕೈಹಿಡಿಯುತ್ತಾರೆ ನಮ್ಮ ಬದುಕಿನ ಬಗ್ಗೆ ಉತ್ತಮ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಕಾದು ಕುಳಿತುಕೊಳ್ಳುವುದು ಮೂರ್ಖತನವೇ ಸರಿ. ಬೇರೆಯವರ ಕೈಗೊಂಬೆಯಾಗಿ ಬದುಕುವ ದುಸ್ಥಿತಿಯನ್ನು ತಂದುಕೊಳ್ಳಬಾರದು. ಇತರರ ಆಲೋಚನೆಗೆ ಗುಲಾಮನಾಗುವುದಕ್ಕಿಂತ, ಸ್ವಂತ ನಿರ್ಧಾರಗಳೊಂದಿಗೆ ರಾಜನಾಗಿ ಬದುಕುವುದು ಲೇಸು. ನಿಮ್ಮ ಜೀವನದ ಹಡಗಿಗೆ ನೀವೇ ನಾವಿಕರಾಗಿ; ನಿರ್ಧಾರಗಳು ನಿಮ್ಮದಾಗಿದ್ದಾಗ ಮಾತ್ರ ತಲುಪುವ ದಾರಿಯೂ ಸ್ಪಷ್ಟವಾಗಿರುತ್ತದೆ. ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವವನಿಗೆ ಅದೃಷ್ಟವೂ ತಲೆಬಾಗುತ್ತದೆ.

### ಸ್ವಂತ ಪ್ರಯತ್ನ

'ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್' ಎಂಬ ಭಗವದ್ಗೀತೆಯ ನುಡಿಯು (ನಿನ್ನನ್ನು ನೀನೇ ಉದ್ಧಾರ ಮಾಡಿಕೊಳ್ಳಬೇಕು. ನಿನ್ನನ್ನು ನೀನೇ ಕುಗ್ಗಿಸಿಕೊಳ್ಳಬಾರದು) ನಮ್ಮ ಉದ್ಧಾರ ನಮ್ಮ ಕೈಯಲ್ಲೇ ಇದೆ. ನಮ್ಮ ಯಶಸ್ಸಿಗೆ ಬೇರೆ ಯಾರೂ ಪ್ರಯತ್ನ ಪಡುವುದಿಲ್ಲ. ಅದಕ್ಕೆ ನಾವೇ ಸ್ವತಃ ಪ್ರಯತ್ನಿಸಬೇಕು. ಯಾರೋ ಬಂದು ನನ್ನ ಬದುಕನ್ನು ಸುಧಾರಿಸುತ್ತಾರೆಂದು ನಂಬಿ ಕುಳಿತುಕೊಳ್ಳುವುದು ಶುದ್ಧ ಮೂರ್ಖತನ. ಇದುವರೆಗೂ ಯಾರೂ ಬೇರೆಯವರ ಹೆಗಲ ಮೇಲೆ ಕುಳಿತು ಸಾಧನೆಯ ಶಿಖರವನ್ನು ಏರಲು ಸಾಧ್ಯವಾಗಿಲ್ಲ. ತನ್ನ ಕಾಲ ಮೇಲೆ ನಿಂತು ಮುನ್ನಡೆಯುವವನು ಮಾತ್ರ ಶ್ರೇಷ್ಠ ಸಾಧಕನಾಗಲು ಸಾಧ್ಯ. ಸ್ವಂತ ಪ್ರಯತ್ನದಿಂದ ಒಂದು ಸಣ್ಣ ಕೆಲಸ ಯಶಸ್ವಿಯಾದರೂ ನಮ್ಮಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ಆ ವಿಶ್ವಾಸವೇ ಮುಂದೆ ದೊಡ್ಡ ಗೆಲವುಗಳಿಗೆ ಪ್ರೇರಣೆಯಾಗುತ್ತದೆ. ಸ್ವ ಪ್ರಯತ್ನದಿಂದ ಗೆಲುವು ಸಿಕ್ಕಾಗ ಸಿಗುವ ಸಂತೋಷ ಅಪಾರ. ಸ್ವ ಪ್ರಯತ್ನದಿಂದ ಸೋತರೂ ನಷ್ಟವೇನಿಲ್ಲ. ಅದು ಚೆಂದದ ಅನುಭವವನ್ನು ನೀಡುತ್ತದೆ. ಸೋಲಿಗೆ ಹೆದರದೆ ಮತ್ತೊಮ್ಮೆ ಪ್ರಯತ್ನಿಸುವ ಛಲ ಬೆಳೆಸುತ್ತದೆ. ಅದರೊಂದಿಗೆ ಧೈರ್ಯದ ಪಾಠವನ್ನು ಕಲಿಸುತ್ತದೆ. ಸ್ವಪ್ರಯತ್ನದ ಹಾದಿಯಲ್ಲಿ ನಡೆದರೆ ಬದುಕು ಅರಳುತ್ತದೆ.

### ಸಮಯ ಪ್ರಜ್ಞೆ

ಹೋದ ಹಕ್ಕಿ ಮರಳಿ ಬಂದೀತು ಗೂಡಿಗೆ ಕಳೆದ ಸಮಯ ಮರಳಿ ಬಾರದು ಬಾಳಿಗೆ. ಸಮಯ ಪ್ರಜ್ಞೆಯುಳ್ಳವನೇ ಜಾಣನು. ಅವನೇ ಜಗವ ಗೆಲ್ಲುವ ಸಾಧಕನು. ಸಮಯದ ಬೆಲೆಯನ್ನು ಅರಿತು ನಡೆದರೆ ಯಶಸ್ಸು ನಿನ್ನ ಪಾದದಡಿ ನೋಡಿ ಎಂಬ ನುಡಿಗಳನ್ನು ನಡೆಯಲ್ಲಿ ಅಳವಡಿಸಿಕೊಳ್ಳಬೇಕು. ಪರಾವಲಂಬಿಗಳಾದರೆ ಸದಾ ಇತರರ ಸಹಾಯಕ್ಕಾಗಿ ಕಾಯುತ್ತ ಅಮೂಲ್ಯವಾದ ಸಮಯ ವ್ಯರ್ಥ ಮಾಡುತ್ತೇವೆ. ಆದರೆ ಸ್ವಾವಲಂಬಿ ವ್ಯಕ್ತಿ ತನ್ನ ಕೆಲಸವನ್ನು ತಾನೇ ಪ್ರಾರಂಭಿಸುವುದರಿಂದ ಸಮಯ ಉಳಿಯುತ್ತದೆ. ಬೇರೆಯವರಿಗೆ ಕಾಯದೆ ಸಕಾಲದಲ್ಲಿ ಕಾರ್ಯಪ್ರವೃತ್ತರಾದರೆ ಕೆಲಸಗಳ ಗುಣಮಟ್ಟವು ಚೆನ್ನಾಗಿರುತ್ತದೆ. ನಿಗದಿತ ಸಮಯದಲ್ಲಿ




ಪೂರ್ಣಗೊಳ್ಳುತ್ತವೆ.

### ಸಾಮರ್ಥ್ಯ

ದೈನಂದಿನ ಅಗತ್ಯಗಳಿಗಾಗಿ ಆರ್ಥಿಕ ಅವಶ್ಯಕತೆಗಳಿಗಾಗಿ ಬೇರೆಯವರ ಮುಖ ನೋಡದೇ ಸ್ವಸಾಮರ್ಥ್ಯದಿಂದ ಅಗತ್ಯಗಳನ್ನು ಪೂರೈಸಿಕೊಳ್ಳಲು ಕಲಿಯಬೇಕು. ಸಾಮರ್ಥ್ಯ ಕೇವಲ ದೈಹಿಕ ಕೆಲಸಗಳಿಗೆ ಪರಿಶ್ರಮಕ್ಕೆ ಮಾತ್ರ ಸೀಮಿತವಾಗಿಲ್ಲ. ಮಾನಸಿಕವಾಗಿ ದೃಢವಾಗಿರುವುದು ಮತ್ತು ಸ್ವತಂತ್ರವಾಗಿ ಆಲೋಚಿಸುವುದನ್ನು ಕೂಡ ಒಳಗೊಂಡಿದೆ ಎಂಬುದನ್ನು ತಿಳಿಯಬೇಕು. ಸರಿ ತಪ್ಪುಗಳನ್ನು



ವಿವೇಚಿಸಿ, ಬೇರೆಯವರ ಪ್ರಭಾವಕ್ಕೆ ಒಳಗಾಗದೆ, ಇಲ್ಲವೇ ಒತ್ತಡಕ್ಕೆ ಮಣಿಯದೆ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಕಷ್ಟದ ಸಂದರ್ಭದಲ್ಲಿ



ಬೇರೆಯವರ ಸಹಾಯಕ್ಕಾಗಿ ಕಾಯದೆ ನಮ್ಮ ಹಾದಿಯನ್ನು ನಾವೇ ಹುಡುಕಿಕೊಳ್ಳಬೇಕೆ ವಿನಃ ಬೇರೆಯವರನ್ನು ದೂಷಿಸುತ್ತ ಕಾಲ ಕಳೆಯಬಾರದು. ಸಾಮರ್ಥ್ಯವು ಸಾಮಾನ್ಯ ವ್ಯಕ್ತಿಯನ್ನು ಗೌರವಾನ್ವಿತ ವ್ಯಕ್ತಿಯನ್ನಾಗಿ ರೂಪಿಸುತ್ತದೆ ಎಂಬುದನ್ನು ಸದಾ ನೆನಪಿನಲ್ಲಿಡಬೇಕು.

### ಮಂತ್ರ

ಬೇರೆಯವರನ್ನು ಅವಲಂಬಿಸಿದವರಿಗೆ ಗೌರವ ಸಿಗುವುದು ಕಷ್ಟ. ಸ್ವಂತ ಕಾಲಿನ ಮೇಲೆ ನಿಂತು ಸಾಧನೆ ಮಾಡಿದ ವ್ಯಕ್ತಿಯನ್ನು ಸಮಾಜ ಗೌರವಿಸುತ್ತದೆ. ಜಗತ್ತಿನ ಅಗ್ರ ಪಂಕ್ತಿಯಲ್ಲಿರುವ ಸಾಧಕರೆಲ್ಲ ಸ್ವಾವಲಂಬನೆಯ ದಾರಿಯಲ್ಲಿ ನಡೆದೆ ಯಶಸ್ಸಿನ ಶಿಖರವನ್ನು ಏರಿದರು. ಪರಾವಲಂಬನೆ ನಮ್ಮನ್ನು ದುರ್ಬಲರನ್ನಾಗಿಸುತ್ತದೆ. ಆದರೆ, ಸ್ವಾವಲಂಬನೆ ನಮ್ಮನ್ನು ಸಶಕ್ತರನ್ನಾಗಿಸುತ್ತದೆ.ನಮ್ಮ ಕಾಲಿನ ಮೇಲೆ ನಾವು ನಿಂತಾಗ ಮಾತ್ರ ಪ್ರಗತಿ ಸಾಧ್ಯ. ಸ್ವಾವಲಂನೆಯ ಮಂತ್ರವನ್ನು ಜೀವನದ ಮಂತ್ರವನ್ನಾಗಿಸಿಕೊಂಡರೆ ಬದುಕು ಗೆಲುವಿನತ್ತ ದಾಪುಗಾಲಿಡುತ್ತದೆ.

**ಲೇಖಕಿ**
**ಜಯಶ್ರೀ.ಜೆ. ಅಬ್ಬಿಗೇರಿ**
**ಇಂಗ್ಲೀಷ್ ಉಪನ್ಯಾಸಕರು**
**ಬೆಳಗಾವಿ**
**ಮೊ: 9449234142**



# ಸೃಜನಾತ್ಮಕ ಬೋಧನೆ & ಕಲಿಕಾ ಕಾರ್ಯತಂತ್ರಗಳು ಕುರಿತು ಕಾರ್ಯಾಗಾರ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸೃಜನಾತ್ಮಕ ಬೋಧನೆ ಮತ್ತು ಕಲಿಕಾ ಕಾರ್ಯತಂತ್ರಗಳು ಕುರಿತು ಒಂದು ದಿನದ ಕಾರ್ಯಾಗಾರ ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸೋಮವಾರ ನಡೆಯಿತು.

ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್(ಸಿಬಿಎಸ್ಇ ಶಾಲೆ ಮತ್ತು ಶ್ರೀ ಬಿ. ಎಂ ಪಾಟೀಲ್ ಪಬ್ಲಿಕ್(ಐಸಿಎಸ್) ಶಾಲೆಯ ಶಿಕ್ಷಕರಿಗಾಗಿ ಆಯೋಜಿಸಲಾದ ಈ ಕಾರ್ಯಾಗಾರವನ್ನು ಶೈಕ್ಷಣಿಕ ಸಂಯೋಜಕಿ ದೀಪಾ ಜಂಬೂರೆ ಉದ್ಘಾಟಿಸಿದರು.

ಜಾಗೃತ ಮನಸ್ಥಿತಿ ಮತ್ತು ಭೋದನೆ ತಂತ್ರಗಳು ವಿಷಯ ಕುರಿತು ವಿಷಯದ ಕುರಿತು ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ (ಸಿಬಿಎಸ್) ಶಾಲೆಯ ಉಪಪ್ರಾಚಾರ್ಯೆ ವಸುಧಾ ನಾರ್ವೇಕರ ಉಪನ್ಯಾಸ ನೀಡಿದರು.

ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ (ಐಸಿ-ಎಸ್) ಶಾಲೆಯ ಪ್ರಾಚಾರ್ಯ ವಿಕ್ರಮ ನಾರ್ವೇಕರ ಅವರು ಸೃಜನಾತ್ಮಕ ಬೋಧನೆ ಮತ್ತು ಕಲಿಕೆಯ ಕಾರ್ಯತಂತ್ರಗಳು ವಿಷಯದ ಕುರಿತು ಮಾತನಾಡಿ ಮನಸ್ಸಿನ ಏಕಾಗ್ರತೆ, ಶಾಂತ ಮನೋಭಾವ ಹಾಗೂ ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂವಹನ ನಡೆಸುವ ವಿಧಾನಗಳ ಕುರಿತು ಶಿಕ್ಷಕರಿಗೆ ತರಬೇತಿ ನೀಡಿದರು.

ಈ ತರಬೇತಿಯಲ್ಲಿ ನಾನಾ ಚಟುವಟಿ-ಕೆಗಳು, ಗುಂಪು ಚರ್ಚೆಗಳು ಹಾಗೂ ಪ್ರಾಯೋಗಿಕ ಅಭ್ಯಾಸಗಳನ್ನು ಆಯೋಜಿಸಲಾಗಿತ್ತು. ನಾನಾ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಯಾವ ರೀತಿ ಕಲಿಕಾ ಆಸಕ್ತಿಯನ್ನು ಉಂಟು ಮಾಡಬಹುದು ಎಂಬುದನ್ನು ಅವರು ವಿವರಿಸಿದರು.

ಆಂಗ್ಲ ಭಾಷಾ ಶಿಕ್ಷಕ ಯೋಗಿರಾಜ ಹಳಕಟ್ಟಿ ಸ್ವಾಗತಿಸಿದರು. ಮೀರಾ ಮೋಕಾಶಿ ವಂದಿಸಿದರು

# ಸಮಾಜವನ್ನು ಬದಲಾಯಿಸುವ ಶಕ್ತಿ ಶಿಕ್ಷಣಕ್ಕಿದೆ : ರವಿಂದ್ರ ಗಡಾದಿ

## ಅಥಣಿಯಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಚಲವಾದಿ (ಬಲಗೈ) ಸಮುದಾಯ ನೌಕರರ ಸಂಘ ಅಥಣಿ ಇವರ ವತಿಯಿಂದ 2025-26ನೇ ಸಾಲಿನ ಎಸ್ಎಸ್ಎಲ್ಸಿ ಮತ್ತು ಪಿಯುಸಿ ದ್ವಿತೀಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಬುಧವಾರ ನಗರದಲ್ಲಿ ಜರುಗಿತು

ಈ ವೇಳೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಐಪಿಎಸ್ ಅಧಿಕಾರಿ ರವಿಂದ್ರ ಗಡಾದಿ ಅವರು, ವಿದ್ಯಾರ್ಥಿಗಳು ಅಂಕ ಗಳಿಕೆ ಮಾಡುವುದು ಮುಖ್ಯ ಆದರೆ ಅಂಕಗಳ ಜೊತೆಗೆ ಜ್ಞಾನ ಸಂಸ್ಕಾರ ಮತ್ತು ಸಮಾಜದ ಬಗ್ಗೆ ಕಾಳಜಿ ಬೆಳೆಸಿಕೊಳ್ಳಬೇಕು ಶಿಕ್ಷಣವು ನಮ್ಮ ಬದುಕನ್ನು ಮಾತ್ರವಲ್ಲ ಇಡೀ ಸಮಾಜವನ್ನು ಬದಲಾಯಿಸುವ ಶಕ್ತಿ ಹೊಂದಿದೆ ಡಾ. ಬಿ.ಆರ್ ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣ ಸಂಘಟನೆ ಹೋರಾಟ ಈ ಮೂರು ಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಯಾವುದೇ ಗುರಿ ಮುಟ್ಟಲು ಸಾಧ್ಯ ಎಂದು ಕಿವಿಮಾತು ಹೇಳಿದ ಅವರು,

ನಮ್ಮ ಸಮುದಾಯದ ಮಕ್ಕಳು ಕೇವಲ ನೌಕರರಾಗದೆ ಆಡಳಿತಗಾರರಾಗಬೇಕು ಇದಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಗಮನ ಹರಿಸಿ ನಿಮ್ಮ ಯಶಸ್ಸು ಇಡೀ ಸಮಾಜಕ್ಕೆ ಮಾದ-ರಿಯಾಗುತ್ತದೆ ಪೋಷಕರು ಮಕ್ಕಳಿಗೆ ಒತ್ತಡ ಹೇರದೆ ಅವರ ಆಸಕ್ತಿಗೆ ಬೆಂಬಲ ನೀಡಬೇಕು ಎಂದು ಅವರು ಸಲಹೆ ನೀಡಿದರು.

ಬೆಂಗಳೂರಿನ ಅಕ್ಕ ಐಎಎಸ್ ಅಕಾಡೆಮಿಯ ನಿರ್ದೇಶಕ ಡಾ. ಶಿವಕುಮಾರ ಅವರು ಮಾತನಾಡಿ, ವಿದ್ಯಾರ್ಥಿಗಳು ಪ್ರತಿದಿನ ಆರು ಗಂಟೆ ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಅದು ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗುತ್ತದೆ.

ಅದೇ ರೀತಿ ಪಾಲಕರು ಸಹ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆ ವಿಶೇಷ ಗಮನ ಹರಿಸಬೇಕು ಬಲಗೈ ಸಮುದಾಯದ ನೌಕರರು ಎಸ್ಎಸ್ಎಲ್ಸಿಯಲ್ಲಿ ಪ್ರತಿ ವರ್ಷ 550ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಉತ್ತಮ ಶಾಲಾ ಕಾಲೇಜುಗಳಿಗೆ ಸೇರಿಸಲು ಸಹಕ-ರಿಸಬೇಕು. ಹೀಗೆ ಮಾಡಿದರೆ ನಿಮ್ಮ ತಾಲೂಕಿನಲ್ಲಿ ನಮ್ಮ ಬಲಗೈ ಸಮುದಾಯವು ಶೈಕ್ಷಣಿಕವಾಗಿ ಶ್ರೀಮಂತ ಸಮುದಾಯವೆಂದು ಗುರುತಿಸಿಕೊಳ್ಳುತ್ತದೆ

ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಪ್ರೇರಣೆಯಾಗಿಟ್ಟುಕೊಂಡು ವಿದ್ಯಾಭ್ಯಾಸ ಮಾಡಿದರೆ, ಗುರಿ ಮುಟ್ಟುವುದು ಖಂಡಿತ ಸಾಧ್ಯ ಅಂಬೇಡ್ಕರ್ ಅವರನ್ನು ಕೇವಲ ಮೆರವಣಿಗೆಯಲ್ಲಿ ಕಾಣದೆ ಅವರ ಬರವಣಿಗೆಯಲ್ಲಿ ಕಾಣಬೇಕು ಪುತ್ಥಳಿಯಲ್ಲಿ ಕಾಣದೆ ಅವರ ಪುಸ್ತಕಗಳಲ್ಲಿ ಕಾಣಬೇಕು ಎಂದು ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಚಲವಾದಿ ಸಮುದಾಯದ ನೌಕರ ಸಂಘದ ಅಧ್ಯಯನದ ಮಹಾಲಿಂಗ ಮೇತ್ರಿ ಹಾಗೂ ಬಿ.ಸಂತೋಷ ಮಾತನಾಡಿದರು.

ಹಾಗೆಯೆ ಶೇ.80% ಕಿಂತ ಅಧಿಕ ಪ್ರತಿಶತ ಪಡೆದ ಎಲ್ ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳನ್ನು ಸನ್ಮಾನ ಮಾಡಿ ಸತ್ಕರಿಸಿದರು

ಈ ಸಂದರ್ಭದಲ್ಲಿ ಬಂತೇಜೀ ಪ್ರಜ್ಞಾಭೋಧಿ ಥೆರೋ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ವಿಲಾಸ ಕಾಂಬಳೆ, ಚಲವಾದಿ ಸಮುದಾಯ ನೌಕರರ ಸಂಘದ ಕಾರ್ಯದರ್ಶಿ ಮಹಾಂತೇಶ ಕಾಂಬಳೆ, ಅಪ್ಪಾಸಾಬ ಸುರ್ಯವಂಶಿ, ಖಜಾಂಚಿ ನಾಗರಾಜ ಕಾಂಬಳೆ, ಸದಸ್ಯರಾದ ಭರತ ಕಾಂಬಳೆ, ಶಿವಾನಂದ ಮೇಲ್ಗಡೆ, ಸಂ-ಜಯ ಸಾಗರ, ಮಲ್ಲೇಶ ಗೊಂದಳೆ, ಉಮೇಶ ಪಾಂಗಿ, ಅಜೀತ ಕುಟಗೊಳಿ, ಕುಮಾರ ಸತ್ತಿಕರ ವಿಜಯ ಕನಾಳ ಸೇರಿದಂತೆ ತಾಲೂಕಿನ ದಲಿತಪರ ಸಂಘಟನೆಗಳು ಹಾಗೂ ವಿದ್ಯಾರ್ಥಿಗಳು ಪಾಲಕರು ಉಪಸ್ಥಿತರಿದ್ದರು.

ನಿರೂಪಣೆ ಶಿವಾನಂದ ಮೇಲ್ಗಡೆ, ಸ್ವಾಗತ ಮಹಾಲಿಂಗ ಮೇತ್ರಿ ಮಾಡಿದರು.

# ಮೇ.30 ರಂದು ವಸತಿ ಶಾಲೆ ಪ್ರವೇಶಕ್ಕೆ ಕೌನ್ಸ್ ಲಿಂಗ್

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ:ಅಲ್ಪ ಸಂಖ್ಯಾತರ ಕಲ್ಯಾಣಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಪ್ರವೇಶಕ್ಕೆ ಕೌನ್ಸಲಿಂಗ್ ಮೇ 30 ರಂದು ಬೆಳಿಗ್ಗೆ 8 ಗಂಟೆಗೆ ಅಫಜಲಪುರ ಟಕ್ಕೆಯಲ್ಲಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆಯಲ್ಲಿ ನಡೆಯಲಿದೆ.

ಅಲ್ಪ ಸಂಖ್ಯಾತರ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಕಾಲೇಜು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳ 2026-27ನೇ ಶೈಕ್ಷಣಿಕ ವರ್ಷದ ಪ್ರಥ-ಮ ಪಿಯುಸಿ ಪ್ರವೇಶಾತಿಗಾಗಿ ಆಯ್ಕೆಯಾದ ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳು ಹಾಗೂ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಈ ಕೌನ್ಸಲಿಂಗ್‌ನಲ್ಲಿ ಭಾಗವಹಿಸಬಹುದಾಗಿದೆ.

ವಿದ್ಯಾರ್ಥಿಗಳು ತಪ್ಪದೇ ಕೌನ್ಸಲಿಂಗ್‌ಗೆ ಹಾಜರಾಗಲು ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ವಿಜಯಪುರ ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳ ಕಛೇರಿ, ಮೌಲಾನಾ ಆಜಾದ ಭವನ,ಜಿಲ್ಲಾ ಪಂಚಾಯತ ರಸ್ತೆ, ಕನಕದಾಸ ಬಡಾವಣೆ, ವಿಜಯಪುರ-586109 ಹಾಗೂ ದೂರವಾಣಿ ಸಂಖ್ಯೆ : 08352-295523 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಇಗ್ನೋ ವಿವಿದ ಕೋರ್ಸ್: ಪ್ರವೇಶಕ್ಕೆ ಆನ್ ಲೈನ್ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವ ವಿದ್ಯಾಲಯವು ಜುಲೈ 2026ರ ಪದವಿ, ಸ್ನಾತಕ ಕೋರ್ಸ್ಗಳು, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್ಗಳಿಗೆ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಕೆಗೆ ಜುಲೈ.15 ಕೊನೆಯ ದಿನಾಂಕ ನಿಗದಿಪಡಿಸಿದೆ. Fresh Admission Link (ODL): https://ignouadmission.samarth.edu.in/ ಹಾಗೂ Fresh Admission Link (Online): https://ignouiop.samarth.edu.in/

ಜುಲೈ2026ರ ಮರು ಪ್ರವೇಶಾತಿಗೆ Re-registrationLink: https://onlinerr.ignou.ac.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆಗೆ ಜೂನ್ 30 ಕೊನೆಯ ದಿನಾಂಕವಾಗಿದೆ.

ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ www.ignou.ac.in ದಲ್ಲಿ ಪ್ರವೇಶ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಕ್ಷೇತ್ರಿಯ ನಿರ್ದೇಶಕರು, ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವ ವಿದ್ಯಾಲಯ ವಿಜಯಪುರ, 1ನೇ ಮಹಡಿ, ಪ್ಲಾಜಾ-2, ಪ್ರವಾಸೋದ್ಯಮ ಇಲಾಖೆಯ ಕಟ್ಟಡ, ಮೊ:08352-252006, email: rc-bijapur@ignou.ac.in ವಿಜಯಪುರ ಸಂಪರ್ಕಿಸಬಹುದಾಗಿದೆ ಎಂದು ಇಗ್ನೋ ಪ್ರಾದೇಶಿಕ ನಿರ್ದೇಶಕರಾದ ಡಾ.ಬಿ.ಎನ್. ದೇವೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಬಕ್ರೀದ್ ಹಿನ್ನೆಲೆ, ವಿಶೇಷ ಚೆಕ್ ಪೋಸ್ಟ್, ವಿಶೇಷ ತಂಡ ರಚನೆ

## ಅನಧಿಕೃತ ಜಾನುವಾರುಗಳ ವಧೆ ಹಾಗೂ ಸಾಗಾಣಿಕೆ ತಡೆಯಲು ಜಿಲ್ಲಾಧಿಕಾರಿ ಡಾ. ಆನಂದ ಕೆ. ಕ್ರಮ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಗುರುವಾರ ನಡೆಯಲಿರುವ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಅನಧಿಕೃತ ಜಾನುವಾರುಗಳ ವಧೆ ಹಾಗೂ ಸಾಗಾಣಿಕೆ ತಡೆಯಲು ಬಕ್ರೀದ್ ಹಬ್ಬದ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಚೆಕ್ ಪೋಸ್ಟ್ ಹಾಗೂ ವಿಶೇಷ ತಂಡ ರಚಿಸಿ ಆದೇಶ ಹೊರಡಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಬಕ್ರೀದ್ ಹಬ್ಬದ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿಗಳು ನಿರ್ಧರಿಸಿದಂತೆ ಜಿಲ್ಲೆಯಲ್ಲಿ ಚೆಕ್ ಪೋಸ್ಟಗಳನ್ನು ಸ್ಥಾಪಿಸಿ ಬಕ್ರೀದ್ ಹಿನ್ನೆಲೆಯಲ್ಲಿ ಮೇ 27 ಮತ್ತು 28 ರಂದು ಚೆಕ್ ಪೋಸ್ಟ್ ಗಳಲ್ಲಿ ಅನಧಿಕೃತ ಜಾನುವಾರುಗಳ ಸಾಗಣೆ ಹಾಗೂ ತಡೆಯಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸೋಲ್ಲಾಪುರ ನಾಕಾ, ಜಮಖಂಡಿ ನಾಕಾ, ತಿಡಗುಂದಿ ಟೋಲ್ ಗೇಟ್, ಕನ್ನೊಳ್ಳಿಯಲ್ಲಿ ಹೊಸದಾಗಿ ಹೆಚ್ಚಿನ ಚೆಕ್ ಪೋಸ್ಟಗಳನ್ನು ತೆರೆಯಲು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ಸ್ಥಾಪಿಸಲಾದ ಚೆಕ್ ಪೋಸ್ಟ್ ವಿವರ:

ಕನಮಡಿ: ನಿಯೋಜಿಸಲಾದ ಅಧಿಕಾರಿ ಹೆಸರು: ಡಾ. ನಾಗರಾಜ್ ಕನ್ನೂರ, ಪಶು ವೈದ್ಯಾಧಿಕಾರಿ. ಇವರೊಟ್ಟಿಗೆ ಸಿಬ್ಬಂದಿ ಬಸವರಾಜ ಸವದತ್ತಿ.

ಸಿದ್ದಾಪೂರ: ಡಾ. ಸಿ.ಟಿ. ರಾಠೋಡ, ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ಎಂ.ಬಿ. ಬಿರಾದಾರ.

ಯತ್ನಾಳ: ಡಾ. ಸಿ.ಟಿ. ರಾಠೋಡ, ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ನಮ್ರತಾ ರಾಠೋಡ.

ಸೋಲ್ಲಾಪುರ ನಾಕಾ: ಡಾ. ರವಿಶಂಕರ ಬಿರಾದಾರ, ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ಅಂಬಾದಾಸ ಗರುಡಕರ,

ಶಿರಾಡೋಣ: ಡಾ.ಸಂಗನಗೌಡ ಬಿರಾದಾರ, ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ಪ್ರವೀಣ ದಂಧರಗಿ.

ಧೂಳಖೇಡ: ಡಾ.ಶಿವಾನಂದ ನಾಯಕ,ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ಉಮೇಶ ಹೊನ್ನಕೋಡೆ.

ಜಮಖಂಡಿ ನಾಕಾ: ಡಾ.ಶಿವಾನಂದ ಪೂಜಾರಿ, ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ರವೀಂದ್ರ ಕುಲಕರ್ಣಿ.

ತಿಡಗುಂದಿ ಟೋಲ್ ಗೇಟ್: ಡಾ. ಪ್ರಶಾಂತ ಬೆಳ್ಳುಂಡಗಿ, ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ಎ.ಕೆ. ಜೋರಾಪುರ.

ಕನ್ನೊಳ್ಳಿ ಚೆಕ್ ಪೋಸ್ಟ್: ಡಾ.ಮಾರುತಿ ತಡ್ಲಗಿ, ಮುಖ್ಯ ಪಶು ವೈದ್ಯಾಧಿಕಾರಿ, ಇವರೊಟ್ಟಿಗೆ ಸಿಬ್ಬಂದಿ ಹತ್ತರಕಿಹಾಳ.

ವಿಶೇಷ ತಂಡಗಳ ವಿವರ:

2020-21ನೇ ಕರ್ನಾಟಕ ಆಧ್ಯಾದೇಶ ಸಂಖ್ಯೆ: 01 ಬಕ್ರೀದ ಹಬ್ಬದ ನಿಮಿತ್ಯ ಗೋಹತ್ಯೆ ನಿಷೇಧ ಕಾಯ್ದೆಯಡಿ ಬಕ್ರೀದ ಹಿನ್ನೆಲೆಯಲ್ಲಿ ಅನಧಿಕೃತ ಜಾನುವಾರುಗಳ ವಧೆ ಹಾಗೂ ಸಾಗಣೆ ತಡೆಯಲು ವಿಜಯಪುರ ನಗರದಲ್ಲಿ ಒಟ್ಟು 05 ತಂಡ ಹಾಗೂ ಗ್ರಾಮೀಣ ಪ್ರದೇಶದಲ್ಲಿ 01 ತಂಡವನ್ನು ರಚಿಸಲಾಗಿದೆ.

ನಿಯೋಜಿಸಿದ ಸಿಬ್ಬಂದಿ ವಿವರ:

ತಂಡ-01 ಶಹಪೂರ ಅಗಸಿ: ಡಾ. ರಮೇಶ ರಾಠೋಡ, ಮೊ:7892929349, ಎಸ್.ಎಸ್. ಹಿರೇಮಠ, ಮೊ: 9741299067, ಸುನೀಲ್ ಬಿ.ಕಲಕೇರಿ ಮೊ:8197599807.

ತಂಡ-2 (ಅಫಜಲಪುರ ಟಕ್ಕೆ): ಡಾ.ಬಾಳಾಸಾಹೇಬ ಬಂಡಿ, ಮೊ: 6362194503, ರಮೇಶ ಮೆಂಡಿಗೇರಿ ಮೊ: 9663156254, ಬಸವರಾಜ ಜುಮನಾಳ ಮೊ: 9110669260.

ತಂಡ-3 ಖಾಜಾ ಹಸನ ದರ್ಗಾ ಹಕೀಮ ಚೌಕ ಹತ್ತಿರ: ಡಾ. ಅಖಿಲ ಜೋಷಿ, ಮೊ:8951592167, ಬಾಬು ಭಜಂತ್ರಿ ಮೊ:9448555676, ಆರ್.ಬಿ. ಬಡಿಗೇರ ಮೊ:8123113859.

ತಂಡ-4 ನಿಸ್ಸಾರ ಮಡ್ಡಿ ಹವೇಲಿ ಗಲ್ಲಿ ಹತ್ತಿರ ಹಳೇ ಜುಮ್ಮಾ ಮಸೀದಿ: ಡಾ. ಮುತ್ತನಗೌಡ ಆರ್. ಬಿರಾದಾರ, ಮೊ: 8310435738, ಕೆ.ಎಫ್. ನಾಯಕ, ಮೊ: 9036468651, ವಿನೋದ ರಾಠೋಡ ಮೊ: 8867192358.

ತಂಡ-5 ಸಕಾಫ ರೋಜಾ ನವಬಾಗ: ಡಾ. ದಯಾನಂದ ಸಜ್ಜನ, ಮೊ: 9845065208, ಶಿವಾನಂದ ವಾರನಕೋಡಿ, ಮೊ: 9380501515, ಯಮನಪ್ಪ ಗಂಗನಹಳ್ಳಿ ಮೊ: 7892427291.


ತಂಡ-6 ತಾಲ್ಲೂಕಿನ ಗ್ರಾಮೀಣ ಪ್ರದೇಶ: ಡಾ. ಪ್ರಕೃತಿ ಬಿ.ಎಸ್. ಮೊ: 8746905369, ಎಂ.ಬಿ. ಭೋಸಲೆ, ಮೊ: 7760136396, ಪ್ರಹ್ಲಾದ ರಾಠೋಡ ಮೊ: 9743753459.


ತಂಡ-7 ತಾಲ್ಲೂಕಿನ ಮೀಸಲು ತಂಡ: ಡಾ.ಸುಧೀರ ನಾಯಕ, ಮೊ: 9986112168, ಆಯ್.ಎಸ್.ಯರನಾಳ ಮೊ: 9900570415, ಆನಂದ ಬುರುಡ ಮೊ: 8123087026.

ಪಶುಪಾಲನಾ ಇಲಾಖೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಸುಜಾತಾ ಎಸ್.ಎಂ. ಮೊ:9845873701 ಇವರನ್ನು ಪಶು ಪಾಲನಾ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಮಹಾನಗರ ಪಾಲಿಕೆಯೊಂದಿಗೆ ಸಮನ್ವಯ ಹಾಗೂ ರಕ್ಷಣಾ ಅಧಿಕಾ-ರಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಬಕ್ರೀದ್ ಹಬ್ಬ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾ-ರಿಗಳಾದ ಡಾ. ಆನಂದ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ತ್ಯಾಗ ಬಲಿದಾನ, ಸತ್ವ ನಿಷ್ಠೆಯ ಸಂಕೇತ ಬಕ್ರೀದ್

■ ಉದಯರಶ್ಮಿ ದಿನಪತ್ರಿಕೆ





**ಇಂದು (ಮೇ.28, ಗುರುವಾರ) ಬಕ್ರೀದ್ ಹಬ್ಬದ ನಿಮಿತ್ತ ಈ ವಿಶೇಷ ಲೇಖನ**

ಅರೇಬಿಕ್ ಭಾಷೆಯಲ್ಲಿ, "ಈದ್" ಎಂದರೆ ಹಬ್ಬ ಎಂದು ಕರೆಯಲ್ಪಡುತ್ತದೆ.ಮುಸ್ಲಿಮರ ಇಸ್ಲಾಮಿಕ ಹಬ್ಬಗಳಾದ ರಂಜಾನ,ಬಕ್ರೀದ್,ಈದ್ ಮಿಲಾದ್ ,ಮೊಹರಂ ಆಚರಣೆ ಪ್ರತಿಯೊಂದು ಒಂದೊಂದು ಸಂಕೇತ ಆಧಾರಿತವಾದವುಗಳು ಅದರಂತೆ ತ್ಯಾಗ ಬಲಿದಾನದ ಸಂಕೇತವೆನಿಸಿದ ಹಬ್ಬ "ಬಕ್ರೀದ್ " ಇದನ್ನು ಇಡಿ ಜಗತ್ತಿನಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತದೆ.

ಇಸ್ಲಾಂ ಧರ್ಮದ ಪ್ರವಾದಿಗಳಲ್ಲಿ ಒಬ್ಬರಾದ ಇಬ್ರಾಹಿಂ(ಅಸ)ತಮ್ಮ ಮಗ ಇಸ್ಮಾಯಿಲ್(ಅಸ)ರನ್ನು ಸೃಷ್ಟಿಕರ್ತನಾದ ಅಲ್ಲಾಹನಿಗೆ ಬಲಿ ಕೊಡಲು ಮುಂದಾ ದಿನವನ್ನೆ "ಬಕ್ರೀದ್ ಅಥವಾ ಬಲಿದಾನದ ಹಬ್ಬ ವೆಂದು" ಆಚರಿಸಲಾಗುವುದು.

 ಹಜ್ ಯಾತ್ರೆ ವಿಶೇಷ

ಈದ್ ಅಲ್-ಅಧಾವನ್ನು ಸಾಮಾನ್ಯವಾಗಿ ಎರಡು ಈದ್ ಹಬ್ಬಗಳ ಪವಿತ್ರವೆಂದು ಪರಿಗಣಿಸಲಾಗಿದೆ, ಈದ್ ಅಲ್-ಫಿತರ್‌ನ ಸುಮಾರು ಎರಡು ತಿಂಗಳ ನಂತರ ಮೆಕ್ಕಾಗೆ ವಾರ್ಷಿಕ ಹಜ್ ಯಾತ್ರೆಯ ಕೊನೆಯಲ್ಲಿ ನಡೆಯುತ್ತದೆ. ಇಸ್ಲಾಮಿಕ್ ಚಂದ್ರನ ಕ್ಯಾಲೆಂಡರ್ ಪ್ರಕಾರ ಎರಡೂ ರಜಾದಿನಗಳ ದಿನಾಂಕಗಳು ಪ್ರತಿ ವರ್ಷ ಒಂದೇ ಆಗಿರುತ್ತವೆ. ಪಾಶ್ಚಾತ್ಯ 365-ದಿನಗಳ ಗ್ರೆಗೋರಿಯನ್ ಕ್ಯಾಲೆಂಡರ್ ಸುಮಾರು 11 ದಿನಗಳು ಉದ್ದವಾಗಿದೆ, ಪ್ರತಿ ವರ್ಷ ದಿನಾಂಕಗಳು ಬದಲಾಗುತ್ತವೆ

ಪಶ್ಚಿಮ ಸೌದಿ ಅರೇಬಿಯಾದಲ್ಲಿ ಇಸ್ಲಾಂನ ಪವಿತ್ರ ನಗರವಾದ ಮೆಕ್ಕಾಗೆ ವಾರ್ಷಿಕ ಹಜ್ ಯಾತ್ರೆಯ ಅಂತಿಮ ದಿನದಂದು ಈದ್ ಅಲ್-ಅಧಾವನ್ನು ಆಚರಿಸಲಾಗುತ್ತದೆ. ಎಲ್ಲಾ ಮುಸ್ಲಿಮರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಐದು ದಿನಗಳ ಹಜ್ ಪ್ರಯಾಣವನ್ನು ಮಾಡಲು ಕೇಳಿಕೊಳ್ಳುತ್ತಾರೆ ಮತ್ತು ಪ್ರತಿ ವರ್ಷ 2 ಮಿಲಿಯನ್ ಗಿಂತಲೂ ಜನರು ಹಜ್ ಯಾತ್ರೆ ಕೈಗೊಳ್ಳುತ್ತಾರೆ.

ಹಬ್ಬದ ಹಿನ್ನಲೆ

ಪ್ರವಾದಿ ಇಬ್ರಾಹಿಂ (ಅಸ)ಅವರ ಸತ್ವ ಪರೀಕ್ಷೆ ಮಾಡಲು ಅಲ್ಲಾಹನು ಒಮ್ಮೆ ಅವರಿಗೆ ನಿನ್ನ ಅತಿ ಪ್ರೀತಿಯ ವಸ್ತುವಿಗೆ ಪಾತ್ರವಾದ ಒಂದು ಜೀವನವನ್ನು ಬಲೆಕೊಡಬಲ್ಲೆಯೋ ಎಂದು ಪ್ರಶ್ನಿಸುತ್ತಾನೆ. ಇದೆಲ್ಲಾ ಆಜ್ಞೆ ಭಗವಂತನದು ಎಂದು ಅರಿತ ಇಬ್ರಾಹಿಂ (ಅಸ) ರು ತಮ್ಮ ಏಕೈಕ ಪುತ್ರನಾದ ಇಸ್ಮಾಯಿಲ(ಅಸ)ರನ್ನು ಅಲ್ಲಾಹನ ಇಚ್ಚೆಯಂತೆ ಬಲಿಕೊಡಬೇಕು ಎಂದು ನಿರ್ಧಾರಕ್ಕೆ ಬರುವರು. ಮನವರಿಕೆ ಮಾಡಿಕೊಂಡ ಅವರು ತಮ್ಮ ಮಗನನ್ನು ಬಲಿಕೊಡಲು ಸಿದ್ಧರಾಗುತ್ತಾರೆ. ಬಲಿ ನೀಡಲು ತಮ್ಮ ಕೈಯಲ್ಲಿದ್ದ ಕತ್ತಿಯನ್ನು ಮಗನ ಕತ್ತಿನ ಮೇಲೆ ಇಡುತ್ತಾರೆ.ಆ ಸಂದರ್ಭದಲ್ಲಿ ಕತ್ತಿಯು ಹರಿಯಲಿಲ್ಲ ತಂದೆಯ ಇಚ್ಚೆಯನ್ನು ಪೂರೈಸಲು ಬಲಿಯಾಗುವ ಸ್ಥಾನದಲ್ಲಿದ್ದ ಪುತ್ರ ಇಸ್ಮಾಯಿಲ(ಅಸ)ರು ತಂದೆಗೆ "ಅಪ್ಪ ನಿನ್ನನ್ನು ಅತಿಯಾದ ಪುತ್ರವಾತ್ಸಲ್ಯ ಕಾಡುತ್ತಿದೆ ಆದ್ದರಿಂದ ನೀನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನನ್ನ ಕುತ್ತಿಗೆಗೆ ಕತ್ತಿಯನ್ನು ಹರಿಸು ಎಂದು ತಿಳಿಸುತ್ತಾನೆ.ಪುತ್ರನ ಹೇಳಿಕೆಯಂತೆ ತಂದೆ ಇಬ್ರಾಹಿಂ(ಅಸ)ಕಣ್ಣಿಗೆ ಬಟ್ಟೆ ಕಟ್ಟಿಕೊಂಡು "ಬಿಸ್ಮಿಲ್ಲಾಹ" ಎಂದು ಹೇಳಿ ಪುತ್ರನ ಕುತ್ತಿಗೆಗೆ ಕತ್ತು ಹರಿಸಿದರು ಕೊನೆಗೆ ದೈವಿಶಕ್ತಿಯಿಂದ ಪುತ್ರ ಇಸ್ಮಾಯಿಲ(ಅಸ)ಕುತ್ತಿಗೆಗೆ ಕತ್ತು ಹರೆಯಲಿಲ್ಲ.

ಇದನ್ನು ಕಂಡ ಪ್ರತ್ಯಕ್ಷರಾದ ದೇವಧೂತ ಜಿಬ್ರಾಯಿಲ "ಓ.. ಇಬ್ರಾಹಿಂ(ಅಸ)ಅವರೇ ನೀವು ಅಲ್ಲಾಹನಲ್ಲಿಟ್ಟ ಸತ್ವ ನಿಷ್ಠೆಯ ಭಕ್ತಿಯ ಫಲದಿಂದ ನಿಮ್ಮ ಮೇಲೆ ಈವರೆಗೆ ನಡೆದಿರುವ ದೈವಿಭಕ್ತಿಯ ಪರೀಕ್ಷೆ ಮಾಡಿಬೆಟ್ಟೇನು ನೀವು ಇಟ್ಟ ಭಕ್ತಿ ಶ್ರದ್ದೆಯಿಂದ ನಿಮ್ಮ ಪುತ್ರ ಉಳಿದನು. ಅದೇ ಕಾರಣಕ್ಕೆ ಪುತ್ರ ಬಲಿದಾನದ ಸ್ಥಳದಲ್ಲಿ ಇಸ್ಮಾಯಿಲ್(ಅಸ)ಅವರನ್ನು ಸರಿಸಿ ಪುತ್ರ ಬಲಿದಾನದ ಬದಲು ಪ್ರಾಣಿಯನ್ನು ಬಲಿ ನೀಡು ಎಂದು ಅಲ್ಲಾಹನೇ ಅಜ್ಞಾಪಿಸಿದ್ದಾನೆ" ಎಂದು ಹೇಳುತ್ತಾರೆ. ಅಲ್ಲಾಹನ ಆಜ್ಞೆಯಂತೆ ಇಬ್ರಾಹಿಂ(ಅಸ) ಅವರು ಪ್ರಾಣಿ ಬಲಿಯನ್ನು ಕೊಡುತ್ತಾರೆ. ಶೈತಾನ್ ಅಥವಾ ಸೈತಾನನು ಇಬ್ರಾಹಿಂ(ಅಸ) ಅವರನ್ನು ಗೊಂದಲಗೊಳಿಸಲು ಪ್ರಯತ್ನಿಸುತ್ತಾನೆ. ಆದರೆ ಇಬ್ರಾಹಿಂ(ಅಸ)ಅವರು ಯಾವುದೇ ಗೊಂದಲಕ್ಕೀಡಾಗದೆ ಇಬ್ರಾಹಿಂ(ಅಸ)ಅವರು ಅವನನ್ನು ಓಡಿಸುತ್ತಾನೆ. ಪ್ರವಾದಿ ಇಬ್ರಾಹಿಂ(ಅಸ)ಅವರು ಅಲ್ಲಾಹನಲ್ಲಿಟ್ಟದ್ದ ಸತ್ವ ನಿಷ್ಠೆಯ ಪ್ರತೀಕವನ್ನು ಈ ದಿನದಂತು ನಾವು ಸ್ಮರಿಸಬಹುದಾಗಿದೆ.

ವಿಶೇಷ ಪ್ರಾರ್ಥನೆ

ಮುಸ್ಲಿಂ ಆರಾಧಕರು ಸಾಮಾನ್ಯವಾಗಿ ಹಬ್ಬದ ಮೊದಲ ದಿನದ ಮುಂಜಾನೆ ಸಾಮೂಹಿಕ ಈದ್ಗಾ ಮೈದಾನಕ್ಕೆ ತೆರಳಿ ಒಗ್ಗೂಡಿ ವಿಶೇಷ ಸಾಮೂಹಿಕವಾಗಿ ವಿಶೇಷ ಪ್ರಾಥ-ರ್ನೆ ಅಥವಾ ಸಲಾತ್ ಮಾಡುತ್ತಾರೆ. ದಾನ-ದೇಣಿಗೆ ನೀಡುತ್ತಾರೆ. ಮತ್ತು ಕುಟುಂಬ ಮತ್ತು ಸ್ನೇಹಿತರೊಂದಿಗೆ ಭೇಟಿ ನೀಡುತ್ತಾರೆ, ಪರಸ್ಪರ ಉಡುಗೊರೆಗಳನ್ನು ವಿನಿಮಯ ಮಾಡಿಕೊಂಡು ಪ್ರೀತಿ ಹಂಚುತ್ತಾರೆ. ಪ್ರಾರ್ಥನೆ ಸಲ್ಲಿಸಿದ ನಂತರ ಪರಸ್ಪರ ಭೇಟಿಯಾಗುವ ಮೂಲಕ ಭಾಂಧವ್ಯಕ್ಕೆ ಸಾಕ್ಷಿಯಾಗುತ್ತಾರೆ. ಮನೆ ಮನೆಗೆ ತೆರಳಿ ಕುರ್ಬಾನಿ ಕಾರ್ಯದಲ್ಲಿ ತೊಡಗಿಸಿಕೊಳ್ಳುತಾರೆ.

ಲೇಖನ
■ ಮಲಿಕ್ ಎಲ್. ಜಮಾದಾರ
ಉಪನ್ಯಾಸಕರು
ವಿಜಯಪುರ.
ಮೊ: 9743129744



**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR